# ಶ್ರೀ ಶಾರದಾ

ಮಾಸಪತ್ರಿಕೆ – 15 ಆಗಸ್ಟ್ 2012

ಬೆಲೆ ರೂ.

॥ ಧಿಯೋ ಯೋನಃ ಪ್ರಚೋದಯಾತ್ ॥

ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - ☏

ಸಂಪುಟ- ಸಂಚಿಕೆ- ಪುಟಗಳು-



ಶೃಂಗೇರಿ ಶ್ರೀಶಾರದಾ ಪೀಠದ ಶ್ರೀಮಹಾಗಣಪತಿ ವಾಕ್ಯಾರ್ಥ ವಿದ್ವತ್ಸಭೆ – ಡಾ। ಎಚ್.ವಿ.ನರಸಿಂಹಮೂರ್ತಿ – ಪುಟ-4

'ಚಾಟಿ – ಚಟಾಕಿ' – ಮಾರ್ಪಳ್ಳಿ ಆರ್ ಮಂಜುನಾಥ್ – ಪುಟ-4



ವೇದಗಣಿತದ ಪರಿಚಯ-2 – ಸಿ.ಎಸ್.ರಾವ್ – ಪುಟ-5

ನಮ್ಮ ಸಮಾಜದ ಬಹುಮುಖ ಪ್ರತಿಭೆ ಎಲೆಯ ಮರೆಯಕಾಯಿ ಪ್ರಚಾರ ಬಯಸದ ಶ್ರೀ ಗುರುರಾಜ ಮಾರ್ಪಳ್ಳಿ – ಎಚ್.ರಶ್ಮೀರಾವ್ ಮಜೂರು, ಉಳಿಯಾರು – ಪುಟ-6


## ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಉದಯ



ಬಹುಕಾಲದ ಬೇಡಿಕೆಯಾಗಿದ್ದ ನಮ್ಮ ಸಮಾಜದ ಅಲ್ಲಲ್ಲಿರುವ ವಿವಿಧ ಸಂಘಗಳೆಲ್ಲಾ ಒಗ್ಗಟ್ಟಾಗಿ ಒಂದು ಒಕ್ಕೂಟ ರಚಿಸಬೇಕೆಂಬ ಕನಸು ಈಗ ನನಸಾಗಿದೆ. ಮೇ ತಿಂಗಳಲ್ಲಿ ಉಡುಪಿಯಲ್ಲಿ ನಡೆದ ಸಮಾವೇಶದಲ್ಲಿ ಚಿಗುರೊಡೆದ ಈ ಪ್ರಸ್ತಾವವನ್ನು ತಾ 29-07-2012 ರಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸದನದಲ್ಲಿ ಜರುಗಿದ ನಮ್ಮ ಸಮಾಜದ ಎಲ್ಲಾ ಸಂಘಗಳ ಪದಾಧಿಕಾರಿಗಳ ಸಭೆಯಲ್ಲಿ ನಮ್ಮ ಸಮಾಜದ ಗಣ್ಯರೆಲ್ಲಾ ಚರ್ಚಿಸಿ ಈ ಬಗ್ಗೆ ಅಧಿಕೃತ ನಿರ್ಣಯವನ್ನು ಕೈಗೊಂಡರು.

ಆರಂಭದಲ್ಲಿ ಸಮಾವೇಶದ ಗೌರವಾಧ್ಯಕ್ಷರಾಗಿದ್ದ ಶ್ರೀ ಎಮ್. ಆರ್ ವಾಸುದೇವರಾವ್ ರವರು ಎಲ್ಲರನ್ನೂ ಸಭೆಗೆ ಸ್ವಾಗತಿಸಿದರು. ಶ್ರೀ ಸಿ.ಎಸ್.ರಾಯರು ಮಹಾಮಂಡಲದ ರಚನೆಯ ಬಗ್ಗೆ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಬಳಿಕ ಶ್ರೀ ಎನ್.ಕೆ.ಜಗನ್ನಿವಾಸ ರಾಯರು ಮಹಾಮಂಡಲದ ಉದ್ದೇಶಗಳು ಹಾಗೂ ಬೈಲಾ ಇವೆರಡರ ಕರಡನ್ನು ಮಂಡಿಸಿದರು. ಈ ಬಗ್ಗೆ ವಿಸ್ತಾರವಾಗಿ ಚರ್ಚೆ ನಡೆದು ಮಹಾಮಂಡಲದ ಉದ್ದೇಶಗಳು ಹಾಗೂ ಬೈಲಾವನ್ನು ಅಂತಿಮಗೊಳಿಸಲಾಯಿತು. ಮಹಾಮಂಡಲದಲ್ಲಿ ನಮ್ಮ ಸಮಾಜದ ಎಲ್ಲಾ ಸಂಘಗಳಿಗೆ ಸದಸ್ಯತನವನ್ನು ನೀಡಬೇಕೆಂದೂ ಅವರಿಗೆ ಖಾಯಂ ಸದಸ್ಯತನ ಶುಲ್ಕ ರೂ 10,000ವೆಂದು ನಿರ್ಧರಿಸಲಾಯಿತು. ಹಾಗೆಯೇ ಈ ಮಹಾಮಂಡಲದಲ್ಲಿ ನಮ್ಮ ಸಮಾಜದ ಗಣ್ಯ ಹಾಗೂ ಸಂಪನ್ಮೂಲ ವ್ಯಕ್ತಿಗಳಿಗೂ ಸದಸ್ಯರಾಗುವ ಅವಕಾಶ ಇರಬೇಕೆಂದೂ ಹಾಗೂ ಹೀಗೆ ಈ ರೀತಿ ಮಹಾಮಂಡಲದ ಖಾಯಂ ಸದಸ್ಯರಾಗ ಬಯಸುವವರಿಗೆ ರೂ 25,000 ಶುಲ್ಕವೆಂದೂ ನಿರ್ಧರಿಸಲಾಯಿತು..ಹಾಗೂ ಸಮಾವೇಶದಲ್ಲೇ ಘೋಷಿಸಲ್ಪಟ್ಟಂತೆ ಶ್ರೀ ಎಮ್.ಆರ್ ವಾಸುದೇವ ರಾವ್ ಗೌರವಾಧ್ಯಕ್ಷರು, ಶ್ರೀ ಸಿ.ಎಸ್ ರಾಯರು ಅಧ್ಯಕ್ಷರು, ಶ್ರೀ ಎನ್.ಕೆ ಜಗನ್ನಿವಾಸ ರಾಯರು ಕಾರ್ಯದರ್ಶಿ, ಶ್ರೀ ಉಮೇಶ್ ಶ್ಯಾನುಭಾಗ್ ಕೋಶಾಧಿಕಾರಿಗಳಾಗಿರುವ ತಾತ್ಕಾಲಿಕ ಆಡಳಿತ ಮಂಡಳಿಯನ್ನೇ ಮುಂದಿನ ಆರು ತಿಂಗಳ ತನಕ ಮುಂದುವರಿಸಿ ಆದಷ್ಟು ಸದಸ್ಯರ ನೊಂದಾವಣಿ ಆದ ಬಳಿಕ ಹೊಸ ಪದಾಧಿಕಾರಿಗಳನ್ನು ಆಯ್ಕೆ ಮಾಡುವುದಾಗಿ ನಿಶ್ಚಯಿಸಲಾಯಿತು. ಈ ಆಡಳಿತ ಮಂಡಳಿಗೆ ಆದಷ್ಟು ಸದಸ್ಯರನ್ನು ಸೇರಿಸಿಕೊಳ್ಳುವ, ಮಹಾಮಂಡಲವನ್ನು ಅಧಿಕೃತವಾಗಿ ನೊಂದಾಯಿಸುವ ಹಾಗೂ ಆರು ತಿಂಗಳೊಳಗೆ ಸದಸ್ಯರೆಲ್ಲರ ಅಧಿವೇಶನವನ್ನು ಕರೆಯುವ ಜವಾಬ್ದಾರಿಯನ್ನು ನೀಡಲಾಯಿತು. ಅಂತಿಮವಾಗಿ ಶ್ರೀ ಎಮ್ ಆರ್. ವಾಸುದೇವ ರಾಯರು ಈಗಷ್ಟೇ ಜನ್ಮ ತಾಳಿರುವ ಈ ಮಹಾಮಂಡಲಕ್ಕೆ ನಮ್ಮ ಸಮಾಜದವರೆಲ್ಲರೂ ಪ್ರೋತ್ಸಾಹಿಸಿ ಬೆಳೆಸಬೇಕೆಂದು ವಿನಂತಿಸಿದರು. ಕೊನೆಯಲ್ಲಿ ಶ್ರೀ ದೇವಾನಂದ ಭಟ್ ಇವರು ಧನ್ಯವಾದ ಸಮರ್ಪಿಸಿದರು.ಈ ಸಭೆಯಲ್ಲಿ ಮೈಸೂರು, ಮುಂಬಯಿ, ಸುಳ್ಯ, ಪುತ್ತೂರು,ಕಡಬ, ವಿಟ್ಲ, ಬಂಟ್ವಾಳ, ಬೆಳ್ತಂಗಡಿ, ಕಾರ್ಕಳ,ಮೂಡಬಿದ್ರಿ, ಪಡುಬಿದ್ರಿ, ಮಂಗಳೂರು, ಉಡುಪಿ, ಕುಂದಾಪುರ ಸಂಘಗಳ ಪ್ರತಿನಿಧಿಗಳೊಂದಿಗೆ ನಮ್ಮ ಸಮಾಜದ ಅನೇಕ ಗಣ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರು.

ವರದಿ : **ಡಾ।ವೈ.ಸುದರ್ಶನ್ ರಾವ್**

## ಕುಂಜಿಬೆಟ್ಟು : ವರಮಹಾಲಕ್ಷ್ಮೀ ವ್ರತ ಆಚರಣೆ




ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ ಮಹಿಳಾ ವೇದಿಕೆಯ ವತಿಯಿಂದ ಸಾಮೂಹಿಕ ವರಮಹಾಲಕ್ಷ್ಮೀ ವ್ರತ ಪೂಜಾ ಧಾರ್ಮಿಕ ಕಾರ್ಯಕ್ರಮವು ತಾ.27-07-2012ರ ಶುಕ್ರವಾರ ಸಾಯಂಕಾಲ 4-30ರಿಂದ ಜರಗಿತು. ಶ್ರೀ ನಾಗಭೂಷಣ ಶಾಸ್ತ್ರಿಯವರು ನಡೆಸಿಕೊಟ್ಟ ಪೂಜಾ ಕಾರ್ಯಕ್ರಮದ ಕರ್ತೃಗಳಾಗಿ ಶ್ರೀ ಜಯರಾಮ ಶಾಸ್ತ್ರಿ ದಂಪತಿಗಳು ಭಾಗವಹಿಸಿದ್ದರು. ನಮ್ಮ ಸಮಾಜ ಬಾಂಧವರಲ್ಲದೆ ಅನೇಕ ಮಹಿಳೆಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.ಸಂಜೆ ಗಂಟೆ 7-30ಕ್ಕೆ ಪೂಜೆಯು ನಡೆದು, ಪ್ರಸಾದವನ್ನು ವಿತರಿಸಲಾಯಿತು.

ವರದಿ : **ಎಚ್.ಎನ್.ಶ್ಯಾನುಭಾಗ್**

## ಚಾತುರ್ಮಾಸದಲ್ಲಿ ಗುರುಗಳ ಭೇಟಿ

**ನಮ್ಮ ಕುಲಗುರುಗಳಾದ ದಕ್ಷಿಣಾಮ್ನಾಯ ಶ್ರೀಕ್ಷೇತ್ರ ಶೃಂಗೇರಿಯ ಜಗದ್ಗುರುಗಳಾದ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು ಈ ಬಾರಿ ತಮ್ಮ ಚಾತುರ್ಮಾಸ ವ್ರತವನ್ನು ಚೆನ್ನೈಯಲ್ಲಿ ಕೈಗೊಂಡಿದ್ದು, ಅವರ ಭೇಟಿಗಾಗಿ (ಸೆಪ್ಟೆಂಬರ್ 9ರಂದು) ಶ್ರೀಶಾರದಾ ಮಂಟಪ ಕುಂಜಿಬೆಟ್ಟು ಇಲ್ಲಿಂದ ಸಮಾಜ ಬಾಂಧವರು ಸೆಪ್ಟೆಂಬರ್ 8ನೇ ತಾರೀಕು ಮಧ್ಯಾಹ್ನ 2-30ಕ್ಕೆ ಉಡುಪಿಯಿಂದ 35 ಸೀಟುಗಳ ಸುಖಾಸೀನ ಬಸ್ಸಿನಲ್ಲಿ ಹೊರಟು ತಾ.12ನೇ ಬುಧವಾರದಂದು ಬೆಳಿಗ್ಗೆ 8-00 ಗಂಟೆಗೆ ಉಡುಪಿಗೆ ತಲುಪುವುದು. ಈ ಪ್ರಯಾಣವನ್ನು ಮಂಗಳೂರಿನ ಪ್ರಖ್ಯಾತ ಪ್ರವಾಸಿ ಸಂಸ್ಥೆ ನಿರ್ಮಲಾ ಟ್ರಾವೆಲ್ಸ್ ಅವರ ಸಹಯೋಗದಲ್ಲಿ ಆಯೋಜಿಸಲಾಗಿದೆ.**

**ತಾ.9ರಂದು ಆದಿತ್ಯವಾರ ಮಧ್ಯಾಹ್ನ ಗುರುಗಳ ಸಂದರ್ಶನದ ಬಳಿಕ ಚೆನ್ನೈನ ಬೀಚುಗಳ ಸಂದರ್ಶನ, ಸೋಮವಾರ ಬೆಳಿಗ್ಗೆ ಮಹಾಬಲಿಪುರಂ ಹಾಗೂ ಇತರ ಪ್ರೇಕ್ಷಣೀಯ ಸ್ಥಳಗಳು, ಮಂಗಳವಾರ ಬೆಳಿಗ್ಗೆ ಕಾಂಚಿಪುರಂ ಭೇಟಿ, ಸಾಯಂಕಾಲ ವೇಲೂರಿನ ಗೋಲ್ಡನ್ ಟೆಂಪಲ್ ಸಂದರ್ಶಿಸಿ, ಉಡುಪಿಗೆ ಮರಳುವುದು.**

**ಈ ಪ್ರಯಾಣದ ನಿಗದಿತ ದರ (ಪ್ರತಿಯೊಬ್ಬರಿಗೆ) :ರೂ.6,500/- (ವಸತಿ ಸೌಲಭ್ಯ, ಊಟೋಪಚಾರ, ದೇವಸ್ಥಾನಗಳ ಪ್ರವೇಶ, ಇತ್ಯಾದಿ ಸೇರಿ.**

ಆಸಕ್ತರು ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ :
ಶ್ರೀ ಪ್ರಫುಲ್ಲಚಂದ್ರ ರಾವ್ **(9880896166)**

ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ(ರಿ.)ದ ಆಶ್ರಯದಲ್ಲಿ

## ಸೌರ ಋಗುಪಾಕರ್ಮವು

**ತಾ.17-09-2012ರಂದು ಸೋಮವಾರ ಶ್ರೀ ಶಾರದಾ ಮಂಟಪದಲ್ಲಿ ನಡೆಯಲಿದ್ದು ಬೆಳಿಗ್ಗೆ 9-30ರಿಂದ ಕಾರ್ಯಕ್ರಮವು ಪ್ರಾರಂಭವಾಗಲಿದೆ.**

*ಸಮಾಜ ಬಾಂಧವರು ಸಮಯಕ್ಕೆ ಸರಿಯಾಗಿ ಬಂದು ಉಪಾಕರ್ಮದಲ್ಲಿ ಭಾಗವಹಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ. ಭಾಗವಹಿಸುವವರು ಹೂ, ತುಳಸಿ, ಹರಿವಾಣ, ಕೌಳಿಗೆಸೌಟನ್ನು ತರಬೇಕಾಗಿ ವಿನಂತಿ.*

– ಕಾರ್ಯದರ್ಶಿ

**ಸಂಪಾದಕ ಮಂಡಳಿ**

ವೈ. ಮೋಹನ ರಾವ್

ಎಚ್.ಎನ್. ಶ್ಯಾನುಭಾಗ್

ಪ್ರಕಾಶ್ ರಾವ್ ಕೋಲ್ಪೆ

ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

ಸಮಾಜ ಬಾಂಧವರು ಯಾವುದೇ ಲೇಖನ, ಸುದ್ದಿ, ವರದಿ, ಇತ್ಯಾದಿಗಳನ್ನು ಕಳುಹಿಸುವಾಗ ತಮ್ಮ ಹೆಸರು ಮತ್ತು ವಿಳಾಸವನ್ನು ನಮೂದಿಸಿ ಸಹಕರಿಸಬೇಕಾಗಿ ವಿನಂತಿ.

-ಸಂಪಾದಕ ಮಂಡಳಿ

## ಸುಭಾಷಿತ-ನೀತಿಶಾಸ್ತ್ರ

**ಪೀತ್ವಾ ಕರ್ದಮ ಪಾನೀಯಾ ಬೇಕಃ**
**ಪಟಪಟಾಯತೇ ।**
**ದಿವ್ಯ ಚೂತರಸಂ ಪೀತ್ವಾ ಗರ್ವಂ ನಾಯಾತಿ**
**ಕೋಕಿಲಃ ॥**

ಕಪ್ಪೆಯು ಬೀದಿನೀರನ್ನು ಕುಡಿದು ವಟವಟ ಎಂದು ಕೂಗುತ್ತದೆ. ಕೋಗಿಲೆಯು ದಿವ್ಯವಾದ ಸಿಹಿ ಮಾವಿನ ಹಣ್ಣಿನ ರಸವನ್ನು ಕುಡಿದರೂ ಗರ್ವಪಡುವುದಿಲ್ಲ.

★★★★

**ಭೂ ಪ್ರದಕ್ಷಿಣ ಷಟ್ಕೇನ ಕಾಶೀ ಯಾತ್ರಾ**
**ಯುತೇನ ಚ ।**
**ಸೇತುಸ್ನಾನ ಶತೈರ್ಯಶ್ಚ ತತ್ಫಲಂ**
**ಮಾತೃವಂದನೇ ॥**

ಆರು ಸಾರಿ ಭೂಪ್ರದಕ್ಷಿಣೆ ಮಾಡುವುದರಿಂದ ಯಾವ ಫಲವುಂಟಾಗುವುದೋ , ಹತ್ತು ಸಾವಿರ ಸಾರಿ ಕಾಶೀ ಯಾತ್ರೆ ಮಾಡುವುದರಿಂದ ಯಾವ ಫಲವುಂಟಾಗುವುದೋ, ನೂರುಸಾರಿ ಸೇತು ಸ್ನಾನ ಮಾಡುವುದರಿಂದ ಯಾವ ಫಲವುಂಟಾಗುವುದೋ ಅವೆಲ್ಲವೂ ಒಂದು ಸಾರಿ ತಾಯಿಗೆ ನಮಸ್ಕಾರ ಮಾಡುವುದರಿಂದ ಲಭಿಸುತ್ತದೆ.

★★★★

**ಅಭ್ಯಾಸಾನುಗತಾ ವಿದ್ಯಾ ಬುದ್ಧಿಃ**
**ಕರ್ಮಾನುಸಾರಿಣೀ ।**
**ಉದ್ಯೋಗಾನುಗತಾ ಸಂಸತ್ ಫಲಂ**
**ಭಾಗ್ಯಾನುಸಾರಿಣೀ ॥**

ಅಭ್ಯಾಸವಿದ್ದಂತೆ ವಿದ್ಯೆ ಬರುವುದು. ಕರ್ಮವಿದ್ದಂತೆ ಬುದ್ಧಿ ಬರುವುದು. ಪ್ರಯತ್ನವಿದ್ದಂತೆ ಸಂಪತ್ತು ಬರುವುದು. ಭಾಗ್ಯವಿದ್ದಂತೆ ಫಲವುಂಟಾಗುವುದು.

*ಸಂಗ್ರಹ : ಎಚ್.ಎನ್.ಶ್ಯಾನುಭಾಗ್*

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



**- ಕೆ. ಆತ್ಮಾರಾಮ ಶಾಸ್ತ್ರೀ**
**ಬೆಂಗಳೂರು**

(ಹಿಂದಿನ ಸಂಚಿಕೆಯಿಂದ...)

ಅವನ ಮಾತನ್ನು ಕೇಳಿ ಜರಾಸಂಧನು ಗಟ್ಟಿಯಾಗಿ ನಕ್ಕನು. ಮತ್ತೆ ಎಂದನು, ''ಹಾಗಿದ್ದರೆ ನಾನು ನಿಮಗೆ ದ್ವಂದ ಯುದ್ಧವನ್ನೇ ಕೊಡುತ್ತೇನೆ. ಆದರೆ ನೀನು ಹೇಡಿ. ನೀನು ನನಗೆ ಹೆದರಿ ಮಥುರೆಯಿಂದ ಓಡಿ ಸಮುದ್ರವನ್ನು ಸೇರಿಕೊಂಡವನು. ನಿನ್ನ ಸಂಗಡ ನಾನು ಯುದ್ಧ ಮಾಡುವುದಿಲ್ಲ. ಇನ್ನು ಅರ್ಜುನ ನನ್ನ ಮುಂದೆ ಹುಡುಗ. ಅವನಿಗೆ ನನ್ನಷ್ಟು ಶಕ್ತಿಯಿಲ್ಲ. ತಕ್ಕಮಟ್ಟಿಗೆ ನನಗೆ ಸಮಬಲನೆಂದರೆ ಭೀಮ. ಅವನೊಟ್ಟಿಗೆ ಹೋರಾಡುತ್ತೇನೆ.'' ಅನಂತರ ಅವನು ಭೀಮನಿಗೆ ಒಂದು ಗದೆಯನ್ನು ಕೊಟ್ಟು, ಇನ್ನೊಂದನ್ನು ತಾನು ತೆಗೆದುಕೊಂಡು ಭೀಮನನ್ನು ಪಟ್ಟಣದ ಹೊರಗೆ ಕರೆದುಕೊಂಡು ಹೋದನು. ಅಲ್ಲಿ ಅವರಿಬ್ಬರೂ ಕಾದಾಡಿದರು. ಚಿತ್ರ ವಿಚಿತ್ರ ಪಟ್ಟುಗಳಿಂದ ಹೊಡೆದಾಡಿಕೊಂಡರು. ಆದರೆ ಯಾರೂ ಸೋಲಲಿಲ್ಲ, ಯಾರೂ ಗೆಲ್ಲಲಿಲ್ಲ. ಹೀಗೆ ಇಪ್ಪತ್ತೇಳು ದಿನಗಳು ಕಳೆದರೂ ಜಯಾಪಜಯ ನಿರ್ಣಯವಾಗಲಿಲ್ಲ. ಆಗ ಭೀಮನು ಕೃಷ್ಣನಿಗೆಂದನು, ''ಮಾಧವ, ಇವನನ್ನು ಸೋಲಿಸುವುದು ನನ್ನಿಂದಾಗದ ಕೆಲಸ''. ಆಗ ಶ್ರೀಕೃಷ್ಣನು ಜರಾಸಂಧನ ಜನ್ಮವೃತ್ತಾಂತವನ್ನು ಜ್ಞಾಪಿಸಿದನು. ಮಗಧರಾಜನಾದ ಬೃಹದ್ರಥನಿಗೆ ಎರಡು ಹೋಳುಗಳಾದ ಒಂದು ಶಿಶು ಜನಿಸಿತು. ಆ ಹೋಳುಗಳನ್ನು ಪಟ್ಟಣದ ಹೊರಗೆ ಎಸೆದರು. ಜರಾ ಎಂಬ ರಾಕ್ಷಸಿಯು ಆ ಹೋಳುಗಳನ್ನು ಸೇರಿಸಿದಳು. ಆದುದರಿಂದ ಆ ಮಗು ಜರಾಸಂಧ ಎಂದು ಹೆಸರು ಪಡೆಯಿತು. ಈಗ ಈ ಜರಾಸಂಧನನ್ನು ವಧಿಸಬೇಕಾದರೆ ಮತ್ತೆ ಅವನನ್ನು ಎರಡು ಹೋಳಾಗಿ ಸೀಳಬೇಕಾದೀತು. ಅವರು ಯುದ್ಧ ಮಾಡುವಾಗ ಶ್ರೀಕೃಷ್ಣನು ಮರದ ಒಂದು ರೆಂಬೆಯನ್ನು ಸೀಳಿ ಭೀಮನಿಗೆ ತೋರಿಸಿದನು. ಆ ಸಂಕೇತವನ್ನು ಅರ್ಥಮಾಡಿಕೊಂಡ ಭೀಮನು ಜರಾಸಂಧನು ನೆಲಕ್ಕೆ ಬಿದ್ದಾಗ ಅವನ ಒಂದು ಕಾಲನ್ನು ತನ್ನ ಕಾಲಿಂದೊತ್ತಿ ಹಿಡಿದು, ಇನ್ನೊಂದು ಕಾಲನ್ನು ಮೇಲಕ್ಕೆತ್ತಿ ಮದಗಜವು ಮರವನ್ನು ಸೀಳುವಂತೆ ಅವನ ಗುದಭಾಗದಿಂದ ಸೀಳಿದನು. ಹೀಗೆ ಜರಾಸಂಧನ ಅಂತ್ಯವಾಯಿತು. ಆಗ ಪ್ರಜೆಗಳು, ''ಅಯ್ಯೋ, ನಮಗೆ ರಾಜನಿಲ್ಲದೆ ರಾಜ್ಯವು ಅರಾಜಕವಾಯಿತು. ಇಂತಹ ದೇಶದಲ್ಲಿ ನಾವು ಸುರಕ್ಷಿತವಾಗಿ ಹೇಗಿರುವುದು?'' ಎಂದು ಗೋಳಾಡಿದರು. ಭಗವಂತನಾದ ಶ್ರೀಕೃಷ್ಣನು ಅವರನ್ನು ಸಮಾಧಾನಪಡಿಸಿ ಜರಾಸಂಧನ ಮಗನಾದ ಸಹದೇವನಿಗೆ ಪಟ್ಟಾಭಿಷೇಕ ಮಾಡಿದನು. ಹಾಗೇ ಸೆರೆಯಲ್ಲಿದ್ದ ರಾಜರನ್ನು ಮುಕ್ತಗೊಳಿಸಿದನು.

ಜರಾಸಂಧನ ಸೆರೆಯಿಂದ ಬಿಡುಗಡೆ ಹೊಂದಿದ ರಾಜರು ಅತ್ಯಂತ ದೀನ ಸ್ಥಿತಿಯಲ್ಲಿದ್ದರು. ಅವರ ಬಟ್ಟೆಗಳು ಮಲಿನವಾಗಿದ್ದವು. ಅವರು ಸ್ನಾನವಿಲ್ಲದೆ ತುಂಬಾ ಕೊಳಕಾಗಿ ನಾರುತ್ತಿದ್ದರು. ಅವರು ಹಸಿವಿನಿಂದ ಕಂಗೆಟ್ಟಿದ್ದರು. ಹೊರಗೆ ಬಂದಾಗ ಅವರಿಗೆ ಶ್ರೀಹರಿಯ ದರ್ಶನವಾಯಿತು. ಅವನು ಪೀತಾಂಬರ ಧಾರಿಯಾಗಿ, ಶ್ರೀವತ್ಸ ಚಿಹ್ನೆಯಿಂದ ಶೋಭಿಸುತ್ತ ಚತುರ್ಭುಜನಾಗಿ ಕಾಣಿಸಿದನು. ಕೈಗಳಲ್ಲಿ ಶಂಖ, ಚಕ್ರ, ಗದಾ, ಪದ್ಮಗಳಿದ್ದವು. ಅವನನ್ನು ನೋಡಿದ ರಾಜರೆಲ್ಲ ಪರಮಾನಂದತುಂದಿಲರಾದರು. ಭಗವಂತನಿಗೆ ಅಡ್ಡಬಿದ್ದು ಬಗೆ ಬಗೆಯಾಗಿ ಸ್ತುತಿ ಮಾಡಿದರು. ವಾಸುದೇವನು ಅವರಿಗೆಲ್ಲ ಸಾಂತ್ವನ ಹೇಳಿ, ಅವರನ್ನೆಲ್ಲ ಸ್ನಾನ ಮಾಡಿಸಿ, ರಾಜರಿಗೊಪ್ಪುವ ಉಡುಗೆ ತೊಡುಗೆಗಳನ್ನು ಕೊಡಿಸಿದನು. ರಾಜೋಚಿತವಾಗಿ ಭೋಜನಾದಿಗಳಿಂದ ಅವರನ್ನು ಸಮ್ಮಾನಿಸಿ ಅವರವರ ದೇಶಗಳಿಗೆ ಕಳುಹಿಸಿಕೊಟ್ಟನು. ಹಾಗೇ ಅವನು ಭೀಮ, ಅರ್ಜುನರ ಜೊತೆಯಲ್ಲಿ ಸಹದೇವ (ಜರಾಸಂಧನ ಮಗ)ನಿಂದ ಸತ್ಕೃತನಾಗಿ ಇಂದ್ರಪ್ರಸ್ಥಕ್ಕೆ ಮರಳಿ ಬಂದನು.

### ೨೪

ಗಿರಿವ್ರಜದಿಂದ ಮರಳಿ ಬಂದ ಶ್ರೀಹರಿಯ ಮಹಿಮೆಯನ್ನು ಕೊಂಡಾಡಿದ ಯುಧಿಷ್ಠಿರನು ಅವನ ಅಪ್ಪಣೆಯಂತೆ ರಾಜಸೂಯಯಾಗದ ಸಿದ್ಧತೆಗಳನ್ನು ಮಾಡಿದನು. ಅವನು ಪುರೋಹಿತ, ಋತ್ವಿಜರನ್ನೆಲ್ಲ ಬರಮಾಡಿಕೊಂಡನು. ಅದೂ ಎಂತೆಂತಹ ಪುರೋಹಿತರು? ಸಿದ್ಧಮಂತ್ರರು, ಸಿದ್ಧವಾಕ್ಕುಗಳು, ಪೌರೋಹಿತ್ಯದಲ್ಲಿ ಪರಮನಿಷ್ಣಾತರಾದವರು. ಕೃಷ್ಣ ದ್ವೈಪಾಯನರಾದ ವ್ಯಾಸರು, ಭಾರದ್ವಾಜರು, ಸುಮಂತು, ಗೌತಮ, ಅಸಿಕ, ವಸಿಷ್ಠ, ಚ್ಯವನ, ಕಣ್ವ, ಮೈತ್ರೇಯ, ಕವಷ, ತ್ರಿತ, ವಿಶ್ವಾಮಿತ್ರ, ವಾಮದೇವ, ಸುಮತಿ, ಜೈಮಿನಿ, ಕ್ರತು, ಪೈಲ, ಪರಾಶರ, ಗರ್ಗ, ವೈಶಂಪಾಯನ, ಅಥರ್ವ, ಕಶ್ಯಪ, ಧೌಮ್ಯ, ಪರಶುರಾಮ, ಶುಕ್ರಾಚಾರ್ಯ, ಆಸುರಿ, ವೀತಿಹೋತ್ರ, ಮಧುಚ್ಛಂದ, ವೀರಸೇನ, ಅಕೃತವ್ರಣ. ಹಾಗೇ ಕುಟುಂಬದವರಾದ ಭೀಷ್ಮ, ಧೃತರಾಷ್ಟ್ರ, ದುರ್ಯೋಧನಾದಿಗಳನ್ನು, ವಿದ್ಯಾಗುರುಗಳಾದ ದ್ರೋಣಾಚಾರ್ಯರನ್ನು, ವಿದುರನನ್ನು, ಮತ್ತಿತರರನ್ನು ಆಹ್ವಾನಿಸಿದನು. ಹಾಗೇ ಅನೇಕ ದೇಶಗಳ ರಾಜರು ಸಪರಿವಾರವಾಗಿ ಆಹೂತರಾಗಿ ಬಂದರು. ಬ್ರಾಹ್ಮಣರ ದೊಡ್ಡ ಸಮುದಾಯವೇ ಆಗಮಿಸಿತು.

ಅನಂತರ ಋತ್ವಿಜರ ಆದೇಶದಂತೆ ಯುಧಿಷ್ಠಿರನು ಯಾಗಭೂಮಿಯನ್ನು ಚಿನ್ನದ ನೇಗಿಲಿನಿಂದ ಉತ್ತನು. ಅತಿ ವಿಶಾಲವಾದ ಯಾಗ ಮಂಟಪ ನಿರ್ಮಾಣವಾಯಿತು. ಪಾಂಡವ ಪ್ರಥಮನು ಯಜ್ಞ ದೀಕ್ಷಿತನಾದನು. ಅವನ ಆಹ್ವಾನದಂತೆ ಬ್ರಹ್ಮಾದಿ ದೇವತೆಗಳೂ, ಗಂಧರ್ವ, ಯಕ್ಷ, ವಿದ್ಯಾಧರ, ಕಿನ್ನರ, ಚಾರಣರೂ ಅಲ್ಲಿ ಉಪಸ್ಥಿತರಾದರು. ಸೋಮರಸವನ್ನು ಹಿಂಡುವ ದಿನ ಮಹಾರಾಜ ಯುಧಿಷ್ಠಿರನು ಯಾಜಕರನ್ನೂ, ಸದಸಸ್ಪತಿಗಳನ್ನೂ ಯಥಾವಿಧಿ ಪೂಜಿಸಿದನು.

ಆಮೇಲೆ ಸಭಾಪೂಜೆಯ ಕಾರ್ಯಕ್ರಮ. ಆದರೆ ಸಭಾಸದರಲ್ಲಿ ಯಾರನ್ನು ಮೊದಲು ಪೂಜಿಸಬೇಕೆಂಬ ವಿಷಯದಲ್ಲಿ ಐಕಮತ್ಯ ಮೂಡಲಿಲ್ಲ. ಆಗ ಸಹದೇವನೆಂದನು, ''ಸಾತ್ವತರ ಪತಿಯಾದ ಭಗವಾನ್ ಶ್ರೀಕೃಷ್ಣನೇ ಅಗ್ರಪೂಜೆಗೆ ಅರ್ಹನಾಗಿದ್ದಾನೆ. ಅವನೇ ಸಮಸ್ತದೇವತೆಗಳೂ, ದೇಶಕಾಲಧನಗಳೂ ಆಗಿದ್ದಾನೆ. ಈ ವಿಶ್ವದ, ಯಜ್ಞಯಾಗಗಳ, ಅಗ್ನಿಯ, ಆಹುತಿಗಳ, ಮಂತ್ರಗಳ, ಜ್ಞಾನಯೋಗ, ಕರ್ಮಯೋಗಗಳ ಆತ್ಮವಾಗಿದ್ದಾನೆ. ಅವನು ಅದ್ವಿತೀಯನು. ಅವನನ್ನು ಬಿಟ್ಟರೆ ಅಗ್ರಪೂಜೆಗೆ ಯೋಗ್ಯರು ಇನ್ನೊಬ್ಬರಿಲ್ಲ. ಅವನನ್ನು ಪೂಜಿಸಿದರೆ ಸಕಲ ದೇವತೆಗಳನ್ನು, ಸರ್ವಜೀವಿಗಳನ್ನು ಪೂಜಿಸಿದಂತಾಗುತ್ತದೆ''. ವಸುದೇವನ ಮಾತನ್ನು ಕೇಳಿ ಭೀಷ್ಮನೇ ಮೊದಲಾದ ಸಭಾಸದರು 'ಸರಿ, ಸರಿ' ಎಂದು ಒಕ್ಕೊರಳಿನಿಂದ ಅನುಮೋದಿಸಿದರು. ಅದರಿಂದ ಅತಿ ಸಂತುಷ್ಟನಾದ ಧರ್ಮರಾಜನು ಭಗವಂತನನ್ನು ಅರ್ಚಿಸಲು ಮುಂದಾದನು.

(ಮುಂದುವರಿಯುವುದು)

## ಹೊಸ ಬೆಳಕು

**ಪುಸ್ತಕ ಪರಿಚಯ :**

**''ದಾರಿದೀಪ''**

***ಲೇಖಕರು :*** **ಮ.ನಾ.ಹೆಬ್ಬಾರ, ಬೆಳ್ವೆ**
***ಪ್ರಕಾಶಕರು :*** **ಶ್ರೀ ತಲ್ಲೂರು ಶಿವರಾಮ ಶೆಟ್ಟಿ**
***ಬೆಲೆ :*** **ರೂ.250/-**

ಚಿತ್ತಾಕರ್ಷಕ ಮುಖಪುಟ ಮತ್ತು 9 ಚಿತ್ರಗಳ ಒಳಪುಟಗಳು, 345 ಪುಟಗಳಲ್ಲಿ 130 ಲೇಖನಗಳನ್ನೊಳಗೊಂಡ 'ದಾರಿದೀಪ' ಗ್ರಂಥದ ಲೇಖಕರಾದ ಮರೂರು ನಾರಾಯಣ ಹೆಬ್ಬಾರ ಇವರ ಕಾವ್ಯನಾಮ 'ಮನಾಹೆಬ್ಬಾರ'. 37 ವರ್ಷಗಳ ಶಿಕ್ಷಣ ಕ್ಷೇತ್ರದಲ್ಲಿನ ಸುದೀರ್ಘ ಸೇವೆಯ ಬಳಿಕ ನಿವೃತ್ತಿ ಹೊಂದಿ ಸಾಹಿತ್ಯ ಸೇವೆಯಲ್ಲಿರುವರು. ಹರಿಕಥೆ, ಯಕ್ಷಗಾನ, ತಾಳಮದ್ದಳೆ ಅರ್ಥಗಾರಿಕೆ, ಕಾವ್ಯವಾಚನ-ಪ್ರವಚನ, ಭಾಷಣ ಕಲೆಗಳಲ್ಲಿ ಪರಿಣತರಾದ ಇವರು ಹಲವು ಸಂಘ ಸಂಸ್ಥೆಗಳಿಂದ ಸನ್ಮಾನಿತರು. 2006ರಲ್ಲಿ ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಯನ್ನು ಹರಿಕಥಾ ಕ್ಷೇತ್ರಕ್ಕಾಗಿ ಗಳಿಸಿದರು. 2009ರಲ್ಲಿ ಆರು ತಿಂಗಳ ಕಾಲ ಅಮೇರಿಕಾ ದೇಶದಲ್ಲಿ ಪ್ರವಾಸ ಮಾಡಿ ಬಿಡುವಿನ ಸಮಯದಲ್ಲಿ 'ಮರೂರು ಶ್ರೀ ದುರ್ಗಾಪರಮೇಶ್ವರೀ ಕ್ಷೇತ್ರ ಮಹಾತ್ಮೆ' ಎಂಬ ಭಾಮಿನಿ ಷಟ್ಪದಿ, ಕಿರುಕಾವ್ಯ 'ಚಂದ್ರ ಚಾಪ' ಎಂಬ ಕವನ ಸಂಗ್ರಹ, ಮುದ್ರಾಡಿ 'ಶ್ರೀ ಆದಿಶಕ್ತಿ ಕ್ಷೇತ್ರ ಮಹಾತ್ಮೆ' ಎಂಬ ವಿವಿಧ ಷಟ್ಪದಿಗಳ ಕಿರು ಕೃತಿಯನ್ನು ರಚಿಸಿದ್ದಾರೆ. ವಿವಿಧ ಪತ್ರಿಕೆಗಳಿಗೆ ನಿಯತಕಾಲಿಕ ಧಾರಾವಾಹಿಗಳನ್ನು ಬರೆಯುತ್ತಿದ್ದಾರೆ.

ಬೆಂಗಳೂರಿನ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾದಿಂದ 'ಷಟ್ಪದಿ ಕವಿ' ಬಿರುದನ್ನೂ, ಗುರುವಾಯನಕೆರೆ ವ್ಯಾಸಾಶ್ರಮದಿಂದ 'ಕೀರ್ತನ ಚತುರ' ಎಂಬ ಪ್ರಶಸ್ತಿಯನ್ನೂ ಸನ್ಮಾನಗಳೊಂದಿಗೆ ಪಡೆದಿರುವರು.

ಈ ಕೃತಿಯ 'ನುಡಿ ತೋರಣ'ವನ್ನು ಅಲಂಕರಿಸಿದ ಡಾ। ಎಚ್.ವಿ.ನರಸಿಂಹ ಮೂರ್ತಿಯವರು ಹೀಗೆ ತಿಳಿಸುತ್ತಾರೆ-''ದಾರಿದೀಪದ ಎಲ್ಲ ಲೇಖನಗಳೂ ಮತ್ತೆ ಮತ್ತೆ ಓದಿ ಮೆಲುಕು ಹಾಕುವಂತಿವೆ. ಶ್ರೀ ಹೆಬ್ಬಾರರ ಅಧ್ಯಯನ, ಅನುಭವ ಹಾಗೂ ವಿಶ್ಲೇಷಣಾ ಸಾಮರ್ಥ್ಯ ಇಲ್ಲಿ ಮಡುಗಟ್ಟಿ ನಿಂತಿರುವುದನ್ನು ಓದುಗರು ಗಮನಿಸಬಹುದು. ಆಲೋಚನೆಯಲ್ಲಿ ಖಚಿತತೆ ಇದ್ದಾಗ ಅಭಿವ್ಯಕ್ತಿಯಲ್ಲಿ ಸ್ಪಷ್ಟತೆ ತಾನಾಗಿಯೇ ಬರುತ್ತದೆ. ಲೇಖಕರಲ್ಲಿ ಇವೆರಡೂ ಸಂಗಮಿಸಿರುವುದರಿಂದ ಇಲ್ಲಿನ ಒಂದೊಂದು ಲೇಖನವೂ ಸದಾಕಾಲ ಬೆಳಕು ಬೀರುವ, ಎಂದೆಂದಿಗೂ ನಂದದ ನಂದಾದೀಪಗಳೇ ಆಗಿವೆ.''

ಈ ಕೃತಿಯ ಪ್ರಕಾಶಕರಾದ ಶ್ರೀ ತಲ್ಲೂರು ಶಿವರಾಮ ಶೆಟ್ಟಿ, ಅಧ್ಯಕ್ಷರು, ಯಕ್ಷಗಾನ ಕಲಾರಂಗ, ರಂಗಭೂಮಿ, ಉಡುಪಿ ಇವರು ಹೀಗೆ ತಿಳಿಸುತ್ತಾರೆ-''ಸೇವಾಸಂಸ್ಥೆಗಳ ಪದಾಧಿಕಾರಿಗಳು ಸಂದರ್ಭ ಸಿಕ್ಕಿದಾಗ ತಮ್ಮ ಭಾಷಣ, ಉಪನ್ಯಾಸಗಳಲ್ಲಿ ನೈತಿಕ, ಧಾರ್ಮಿಕ, ಶೈಕ್ಷಣಿಕ ಮೌಲ್ಯಗಳುಳ್ಳ ವಿಷಯಗಳನ್ನು ಸಮಾಜಕ್ಕೆ ತಿಳಿಯಪಡಿಸುವ ಸಲುವಾಗಿ ಅವರಿಗೆ ಪ್ರೇರಣೆ ನೀಡಬಲ್ಲ 'ಮಾರ್ಗದರ್ಶಕ'ವೊಂದರ ಅನ್ವೇಷಣೆಯಲ್ಲಿ ತೊಡಗಿದ್ದ ನನ್ನ ಗಮನ ಸೆಳೆದುದು ಪತ್ರಿಕಾ ಮಾಧ್ಯಮಗಳಲ್ಲಿ ಪ್ರಚಾರವಾಗುತ್ತಿರುವ 'ಜ್ಞಾನದೀವಿಗೆ', 'ಚೆನ್ನುಡಿ' ಇತ್ಯಾದಿ ನೀತಿ ಬೋಧಕ ಸಂಗತಿ. ಇವುಗಳನ್ನೆಲ್ಲ ಸಂಗ್ರಹಿಸಿ ಹೊತ್ತಗೆಯ ರೂಪಕೊಡಲು ಯೋಚಿಸಿದೆ. ನಿವೃತ್ತ ಉಪನ್ಯಾಸಕರೂ, ಪ್ರಸಿದ ಹರಿದಾಸರೂ, ಯಕ್ಷಗಾನ ಕಲಾವಿದರೂ ಆಗಿರುವ ಶ್ರೀ ಮ.ನಾ.ಹೆಬ್ಬಾರರಲ್ಲಿ ಈ ವಿಚಾರದಲ್ಲಿ ವಿನಂತಿಸಿಕೊಂಡಾಗ ಅವರು ಸಂತೋಷದಿಂದ ಒಪ್ಪಿಕೊಂಡು ಅತೀ ಶೀಘ್ರ ಅವಧಿಯಲ್ಲಿ, ತನ್ನ ಅನುಭವದ ಆಳದಿಂದ ಆಯ್ದ ಆಣಿಮುತ್ತುಗಳೊಂದಿಗೆ ಪೋಣಿಸಿ 'ದಾರಿದೀಪ'ವನ್ನು ಸಿದಪಡಿಸಿದರು''.

''ಯಕ್ಷಗಾನದ ಕೇವಲ ಕೆಲವು ಹೆಜ್ಜೆಗಳನ್ನು ನಾನು ಶ್ರೀಯುತ ತಲ್ಲೂರು ಶಿವರಾಮ ಶೆಟ್ಟಿಯವರಿಗೆ ಕಲಿಸಿದ್ದರಿಂದ ನನ್ನನ್ನು ಗುರು ಎಂದು ಭಾವಿಸಿ, ತಾನು ಸಂಗ್ರಹಿಸಿ, ಸಂಯೋಜಿಸಿ ಪ್ರಕಟಿಸುತ್ತಿರುವ 'ದಾರಿದೀಪ' ವೆಂಬ ಬೃಹತ್ ಹೊತ್ತಗೆಗೆ ನನ್ನಿಂದ ಶುಭ ಹಾರೈಕೆ ಯನ್ನು ಕೇಳಿರುತ್ತಾರೆ..... ಇವರ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕಿದ ನಿವೃತ್ತ ಉಪನ್ಯಾಸಕರೂ, ಕಲಾವಿದರೂ ಆದ ಶ್ರೀ ಮ.ನಾ.ಹೆಬ್ಬಾರರು ಈ ಸಂಕಲನವನ್ನು ಸುಂದರವಾಗಿ ಸಿದಪಡಿಸಿರು ತ್ತಾರೆ.... ಈ ಪುಸ್ತಕವು ಜನಪ್ರಿಯವಾಗಿ ಸಮಾಜಕ್ಕೆ ಸಹಜವಾದ 'ದಾರಿದೀಪ' ವಾಗಲೆಂದು ಹಾರೈಸುತ್ತಾ ಇಂತಹ ಧಾರ್ಮಿಕ ಹಾಗೂ ಬೋಧಪ್ರದ ಸಾಹಿತ್ಯಿಕ ಸಂಕಲನಗಳು ಇವರಿಬ್ಬರಿಂದ ಇನ್ನೂ ಬರಲಿ ಎಂದು ನಿರೀಕ್ಷಿಸುತ್ತೇನೆ'' ಎಂದು ಬನ್ನಂಜೆ ಸಂಜೀವ ಸುವರ್ಣ, ಪ್ರಾಂಶುಪಾಲರು, ಯಕ್ಷಗಾನ ಕೇಂದ್ರ, ಎಂ.ಜಿ.ಎಮ್.ಕಾಲೇಜು, ಉಡುಪಿ ಇವರು ಶುಭ ಹಾರೈಸಿದ್ದಾರೆ.

**– ವೈ. ಮೋಹನ ರಾವ್.**

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಆಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ , ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ.

# ಉಚಿತ ಇಂಗ್ಲೀಷ್ ಸ್ಪೀಕಿಂಗ್ ಕೋರ್ಸ್ ಮತ್ತು ಪುಸ್ತಕ ವಿತರಣೆ



ಇತ್ತೀಚೆಗೆ ಇನ್ನಾ ದಿನೇಶ್‌ರಾವ್ ಮತ್ತು ಡಾ। ದಯಾನಂದ ಎಸ್.ರಾವ್ ಸ್ಮರಣಾರ್ಥ ಬೆಳ್ಮಣ್ ಪದವಿ ಪೂರ್ವ ಕಾಲೇಜು, ಪಲಿಮಾರ್, ಇನ್ನಾ ಮತ್ತು ಶ್ರೀ ವಿ.ಬೋ.ಹಿ. ಶಾಲೆ ಕೆದಿಂಜೆ ಇಲ್ಲಿ ಸುಮಾರು 268 ಮಕ್ಕಳಿಗೆ 21 ದಿನಗಳ ಉಚಿತ ಇಂಗ್ಲೀಷ್ ಸ್ಪೀಕಿಂಗ್ ಕೋರ್ಸ್ ಮತ್ತು ಬರೆಯುವ ಪುಸ್ತಕವನ್ನು ಟ್ರಸ್ಟ್‌ಗಳ ಸಹಕಾರದಿಂದ ನೀಡಲಾಯಿತು. ಇನ್ನಾ ಐ.ಚಂದ್ರಕಾಂತ ರಾವ್, ಡಾ। ಶ್ರೀಕಾಂತ ರಾವ್, ಲಕ್ಷ್ಮೀಕಾಂತ ರಾವ್, ಶಶಿರೇಖಾ ರತ್ನಾಕರ ರಾವ್, ವೇದಾವತಿ ಎಲ್.ರಾವ್ ಮೊದಲಾದವರು ಕಾರ್ಯಕ್ರಮ ದಲ್ಲಿ ಭಾಗವಹಿಸಿ ಮುಂದೆಯೂ ಈ ಕಾರ್ಯಕ್ರಮವನ್ನು ತಮ್ಮ ತಂದೆಯವರು ಸೇವೆ ಮಾಡಿದ ಹಾಗೂ ತಾವು ಕಲಿತ ಸಂಸ್ಥೆಗಳಿಗೆ ಕನ್ನಡ ಮಾಧ್ಯಮದ ಮಕ್ಕಳು ಮುಂದೆ ಬರುವಂತೆ ಮಾಡಲು ಈ ಕಾರ್ಯಕ್ರಮವನ್ನು ಮುಂದುವರಿಸುವ ಭರವಸೆ ನೀಡಿದರು. ಇದಕ್ಕಾಗಿ ಡಾ। ದಯಾನಂದ ಎಸ್.ರಾವ್ 4 ಲಕ್ಷ ನಿಧಿಯನ್ನು ಇಟ್ಟಿದ್ದಾರೆ. ಅಲ್ಲದೆ ಇನ್ನಾ ದಿನೇಶ್ ರಾವ್ ಇವರ ಮಕ್ಕಳು ಶಾಲಾ ಮಕ್ಕಳಿಗಾಗಿ ಪ್ರತಿವರ್ಷ ಸುಮಾರು ರೂ. 1 ಲಕ್ಷ ವಿನಿಯೋಗಿಸುತ್ತಾರೆ.

ಶ್ರೀಮತಿ ವಿಮಲಾ ದಿನೇಶ್ ರಾವ್ ಪುಸ್ತಕ ವಿತರಣೆ ಯಲ್ಲಿ ಪುಸ್ತಕ ನೀಡಿ ಶುಭಹಾರೈಸಿದರು. ನಂದಳಿಕೆ ಬಾಲಚಂದ್ರ ರಾವ್, ಕರ್ನಾಟಕ ಬ್ಯಾಂಕ್, ಪ್ರಕಾಶ್ ರಾವ್, ಮುಖ್ಯ ಶಿಕ್ಷಕ ಇನ್ನಾ ಪ್ರೌಢಶಾಲೆ, ಸುಬ್ರಹ್ಮಣ್ಯ, ಶಿಕ್ಷಣ ಇಲಾಖೆ ಉಡುಪಿ, ಗ್ರಾಮ ಪಂಚಾಯತ್ ಅಧ್ಯಕ್ಷೆ ಮಲ್ಲಿಕಾ ರಾವ್ ಹಾಗೂ ಜೇಸೀ ಅಧ್ಯಕ್ಷ ದಿನೇಶ್, ಚಾರಿಟೇಬಲ್ ಅಧ್ಯಕ್ಷ ಜಯಂತ್ ರಾವ್ ಶುಭ ಹಾರೈಸಿದರು. ಯನ್.ಸುಧಾಕರ್ ರಾವ್ ಮುಖ್ಯ ಶಿಕ್ಷಕ ಕೆದಿಂಜೆ ಇವರು ಪ್ರಸ್ತಾವ ವನ್ನು ಮಾಡಿ ಧನ್ಯವಾದವನ್ನು ನೀಡಿದರು.

**-ಯನ್. ಸುಧಾಕರ ರಾವ್**

# ಕರ್ನಾಟಕ ಲಲಿತಕಲಾ ಅಕಾಡೆಮಿಯ ದ.ಕ. ಜಿಲ್ಲೆಯ ಗೌರವ ಸಂಚಾಲಕರಾಗಿ ರಾಜೇಂದ್ರ ಕೇದಿಗೆ ಆಯ್ಕೆ



ಮಂಗಳೂರಿನ ಕಲಾವಿದ ರಾಜೇಂದ್ರ ಕೇದಿಗೆ ಇವರು ಕರ್ನಾಟಕ ಲಲಿತಕಲಾ ಅಕಾಡೆಮಿಯ ದ.ಕ. ಜಿಲ್ಲೆಯ ಗೌರವ ಸಂಚಾಲಕರಾಗಿ ಆಯ್ಕೆಯಾಗಿರುತ್ತಾರೆ. ಅಕಾಡೆಮಿಯ ನೂತನ ಅಧ್ಯಕ್ಷರಾಗಿರುವ ಚಿ.ಸು.ಕೃಷ್ಣ ಸೆಟ್ಟಿ ಹಾಗೂ ಸದಸ್ಯ ಮಂಡಳಿಯು ಇವರ ಆಯ್ಕೆಯನ್ನು ಅಂಗೀಕಾರಗೊಳಿಸಿದೆ. ಕೇದಿಗೆಯವರು ಕರಾವಳಿ ಚಿತ್ರಕಲಾ ಚಾವಡಿಯ ಸಂಘಟನಾ ಕಾರ್ಯದರ್ಶಿಯಾಗಿದ್ದು ಚಿತ್ರಕಲಾ ಪ್ರದರ್ಶನ, ಕಲಾಶಿಬಿರ, ಕಲಾಮೇಳಗಳಲ್ಲಿ ದುಡಿದಿರುವ ಉತ್ತಮ ಸಂಘಟಕರಾಗಿರುವರು . ಜಿಲ್ಲಾ ವ್ಯಾಪ್ತಿಯಲ್ಲಿ ನಡೆಸಬಹುದಾದ ಕಾರ್ಯಕ್ರಮಕ್ಕೆ ರೂಪುರೇಷೆಗಳನ್ನು ಸಿದ್ಧಪಡಿಸಿ ಅಕಾಡೆಮಿಗೆ ಸಲ್ಲಿಸುವಂತಹ ಜವಾಬ್ದಾರಿ ಇವರದ್ದಾಗಿರುತ್ತದೆ.

**-ಕಾರ್ಯದರ್ಶಿ**

# ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ರಿ.) ಶೇ.10 ಡಿವಿಡೆಂಡ್ ಘೋಷಣೆ

ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ರಿ) ಬಿಜೈ ರಸ್ತೆ ಮಂಗಳೂರು ಇದರ 2011–12ರ ಸಾಲಿನ 75 ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯು ದಿನಾಂಕ 8–7–2012ರ ಆದಿತ್ಯವಾರದಂದು ಶ್ರೀ ಸುಬ್ರಹ್ಮಣ್ಯ ಶತಮಾನೋತ್ಸವ ಸಭಾ ಭವನದಲ್ಲಿ ನೆರವೇರಿತು.

ಸಂಘವು 2010–11ನೇ ಸಾಲಿನಲ್ಲಿ ರೂ 2.59 ಲಕ್ಷಗಳ ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.10% ಲಾಭಾಂಶವನ್ನು ಈ ಸಂದರ್ಭದಲ್ಲಿ ಘೋಷಿಸಲಾಯಿತು. ಸಂಘವು ಪ್ರಸ್ತುತ 2011–12 ನೇ ಸಾಲಿನಲ್ಲಿ ವಾರ್ಷಿಕ ರೂ.14 ಕೋಟಿಗಳ ವಹಿವಾಟು ನಡೆಸಿದ್ದು, ರೂ.4.02 ಲಕ್ಷಗಳ ತಾತ್ಕಾಲಿಕ ಲಾಭಗಳಿಸಿರುತ್ತದೆ. ಸಂಘವು ಪ್ರಸ್ತುತ ಮಂಗಳೂರಿನಲ್ಲಿ ಮುಖ್ಯ ಕಛೇರಿ ಮತ್ತು ಪುತ್ತೂರಿನಲ್ಲಿ ಶಾಖೆಯನ್ನು ಹೊಂದಿದ್ದು, ಮುಂಬರುವ ಸಾಲಿನಲ್ಲಿ ಸಂಘದ ವ್ಯಾಪ್ತಿಯಲ್ಲಿ ಇನ್ನೂಹೆಚ್ಚಿನ ಶಾಖೆಗಳನ್ನು ತೆರೆದು ತನ್ನ ಸದಸ್ಯರಿಗೆ ಹೆಚ್ಚಿನ ಸೌಲಭ್ಯವನ್ನು ಒದಗಿಸಲು ಮತ್ತು ವಹಿವಾಟನ್ನು ಹೆಚ್ಚಿಸಲು ತೀರ್ಮಾನಿಸಲಾಗಿದೆ ಎಂದು ಸಂಘದ ಅಧ್ಯಕ್ಷರಾದ ಶ್ರೀ ಕರುಣ್ ರಾವ್ ಬೆಳ್ಳೆ ಇವರು ಸಭೆಯಲ್ಲಿ ವಿವರಿಸಿದರು.

**-ಕಾರ್ಯದರ್ಶಿ**

# ಗುರು ಪೌರ್ಣಮಿ

ದಿನಾಂಕ 3–7–2012 ಮಂಗಳವಾರ ದಿನ (ಗುರು ಪೌರ್ಣಮಿ) ಮಾರ್ಪಳ್ಳಿ ಶ್ರೀ ಯಂ.ಗಂಗಾಧರ ರಾವ್ ಮತ್ತು ಸಹೋದರರು ಸೇರಿ ಶ್ರೀ ರಾಜರಾಜೇಶ್ವರಿ ದೇವರ ಸನ್ನಿಧಿಯಲ್ಲಿ ಬೆಳಗ್ಗೆ ಗಣಪತಿ ಹೋಮ, ಗುರುಪೂಜೆ, ಶ್ರೀ ಸತ್ಯನಾರಾಯಣ ಪೂಜೆ, ಹಾಗೂ ರಾತ್ರಿ ದುರ್ಗಾನಮಸ್ಕಾರ ಪೂಜೆ, ಬ್ರಾಹ್ಮಣ ಸಂತರ್ಪಣೆಯೊಂದಿಗೆ ನಡೆಸಿ ಶ್ರೀ ದೇವಿಯ ಕೃಪೆಗೆ ಪಾತ್ರರಾದರು.

**-ಎಮ್.ಗಂಗಾಧರ ರಾವ್**


ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ರಿ)

ಎಲ್.ನಂ.366, ಬಿಜೈ ರಸ್ತೆ (ಸುಬ್ರಹ್ಮಣ್ಯ ಸಭಾ ಕಟ್ಟಡ) ಮಂಗಳೂರು-3
ಶಾಖೆ: 1ನೇ ಮಹಡಿ, ಪುತ್ತೂರು ಸೆಂಟರ್, ಪುತ್ತೂರು, ದ.ಕ., 574 201.
ಮುಖ್ಯ ಕಛೇರಿ: ದೂರವಾಣಿ : 0824-2491895 ಶಾಖೆ : ದೂರವಾಣಿ: 08251-235895

2012 ಸಂಘದ ಐತಿಹಾಸಿಕ ವರ್ಷ | ನಮ್ಮ ಸಂಘಕ್ಕೆ 75ರ ಸಂಭ್ರಮ

75th Year AMRUTHA MAHOTHSAVA

ನಿಮ್ಮ ಹಣ 77★ ತಿಂಗಳಲ್ಲಿ ದ್ವಿಗುಣಗೊಳ್ಳುವ 15.75% ವಾರ್ಷಿಕ ಇಳುವರಿ ( )ಗಳಿಸುವ

ವಿಶೇಷ ಹೂಡಿಕೆ ಯೋಜನೆ 2

★ಷರತ್ತುಗಳು ಅನ್ವಯಿಸುತ್ತವೆ

ಅಮೃತಮಹೋತ್ಸವ ನಗದು ಸರ್ಟಿಫಿಕೇಟು



ಇದು ಸೀಮಿತ ಅವಧಿಯ ಕೊಡುಗೆ

# ಶೃಂಗೇರಿ ಶ್ರೀಶಾರದಾ ಪೀಠದ ಶ್ರೀಮಹಾಗಣಪತಿ ವಾಕ್ಯಾರ್ಥ ವಿದ್ವತ್ಸಭೆ

- ಡಾ। ಎಚ್.ವಿ.ನರಸಿಂಹಮೂರ್ತಿ,
ವಿಶ್ರಾಂತ ಪ್ರಾಧ್ಯಾಪಕರು
ಕುಂದಾಪುರ-576 201.



(ಹಿಂದಿನ ಸಂಚಿಕೆಯಿಂದ...)

ಇದರಿಂದ ಉತ್ತೇಜಿತರಾದ ಆ ತರುಣ ಪಂಡಿತರು ಸ್ವಲ್ಪ ಸಾವರಿಸಿಕೊಂಡು, ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾರೆ. ಅವರ ಭೀತಿ-ಸಂಕೋಚಗಳೆಲ್ಲ ದೂರವಾಗಿ, ನಂತರ ಪ್ರತಿವರ್ಷವೂ ಈ ವಾಕ್ಯಾರ್ಥವಿದ್ವತ್ಸಭೆಗೆ ಬರಲು ನಿರ್ಧರಿಸುತ್ತಾರೆ. ಜಗದ್ಗುರುಗಳವರು ಹಸನ್ಮುಖದಿಂದ ಅವರನ್ನು ಆಶೀರ್ವದಿಸುತ್ತಾರೆ.

ಶ್ರೀ ಮಠದ 'ಶಾಸ್ತ್ರಪೋಷಕ ಸಭಾ'ದ ಆಶ್ರಯದಲ್ಲಿ ನಡೆಸಲಾಗುವ ವಿದ್ವತ್ಪರೀಕ್ಷೆಯಲ್ಲಿ ವಿಶಿಷ್ಟಸ್ಥಾನ ಪಡೆದ ಕೆಲವು ವಿದ್ಯಾರ್ಥಿಗಳನ್ನು ಸ್ವತಃ ಜಗದ್ಗುರುಗಳವರೇ ಪರೀಕ್ಷಿಸಿ, ಅದರಲ್ಲಿ ಜಯಗಳಿಸಿದವರಿಗೆ, 'ವಿದ್ವತ್‌ಪ್ರವರ' ಎಂಬ ಬಿರುದು ನೀಡಿ ಗೌರವಿಸಲಾಗುತ್ತದೆ. ಶಾಸ್ತ್ರಾಧ್ಯಯನ ಮಾಡುವ ಅನೇಕ ವಿದ್ಯಾರ್ಥಿಗಳಿಗೆ ಶ್ರೀಮಠದಿಂದ ವಿದ್ಯಾರ್ಥಿವೇತನ ನೀಡಿ ಪ್ರೋತ್ಸಾಹಿಸಿ, ವಿದ್ವತ್ಸಭೆಗೆ ಆಹ್ವಾನಿಸಲಾಗುತ್ತದೆ.

ಇತ್ತೀಚಿನ ವಾಕ್ಯಾರ್ಥ ವಿದ್ವತ್ಸಭೆಯೊಂದರ ಸಮಾರೋಪ ಸಮಾರಂಭದಲ್ಲಿ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು ಅನುಗ್ರಹ ಭಾಷಣ ಮಾಡಿ "ಏಕವ್ಯಕ್ತಿಯು ಅನೇಕ ಶಾಸ್ತ್ರಗಳನ್ನು ಅರಿಯುವುದು ಸುಲಭವಲ್ಲ, ಈ ವಿದ್ವತ್ಸಭೆಯು ಅನೇಕ ಶಾಸ್ತ್ರಗಳ ಪರಿಚಯವನ್ನು ಪಡೆಯಲು ಉತ್ತಮ ವೇದಿಕೆಯಾಗಿದೆ. ಶಾಸ್ತ್ರನಿಷ್ಣಾತರಾದ ಅನೇಕ ವಿದ್ವಾಂಸರು ಇದರಲ್ಲಿ ಪಾಲ್ಗೊಂಡಿದ್ದಾರೆ. ಅದರಲ್ಲೂ ಅನೇಕ ಯುವವಿದ್ವಾಂಸರು ಭಾಗವಹಿಸಿರುವುದು ನಮಗೆ ಅತ್ಯಂತ ಸಂತಸದಾಯಕವಾಗಿದೆ. ಮುಂದಿನ ದಿನಗಳಲ್ಲಿ ಹಿರಿಯ ವಿದ್ವಾಂಸರು ಕಿರಿಯ ವಿದ್ವಾಂಸರನ್ನು ಶಾಸ್ತ್ರಪಾಂಡಿತ್ಯಗಳಿಸುವಂತೆ ತರಬೇತುಗೊಳಿಸಬೇಕು" ಎಂಬ ಕಿವಿಮಾತನ್ನು ಹೇಳಿದ್ದರು. ಕರ್ನಾಟಕದ ರಾಜ್ಯಪಾಲರಾಗಿದ್ದ ಶ್ರೀ ಟಿ.ಎನ್. ಚತುರ್ವೇದಿಯವರು 2002ರ ವಾಕ್ಯಾರ್ಥ ಮಹಾಸಭೆಯ ಕೊನೆಯದಿನ ಅಭ್ಯಾಗತರಾಗಿ ಭಾಗವಹಿಸಿ, "ನಮ್ಮ ಸಾಂಸ್ಕೃತಿಕ ಸಂಪತ್ತು ಅಪಾರವಾದುದು. ಅದನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಹೆಚ್ಚಿನ ಪ್ರಯತ್ನಗಳ ಅವಶ್ಯಕತೆ ಇದೆ. ಈ ದಿಶೆಯಲ್ಲಿ ಶೃಂಗೇರಿ ಶ್ರೀ ಶಾರದಾ ಪೀಠ ಉತ್ತಮ ಕೆಲಸವನ್ನು ಮಾಡುತ್ತಿದೆ. ಕೆಲವರು ಸಂಸ್ಕೃತವು ಮೃತ ಭಾಷೆಯೆಂದು ಹೇಳುತ್ತಾರೆ. ಆದರೆ ಇಲ್ಲಿ ನಡೆಯುವ ಈ ಸದಸ್ಸನ್ನು ನೋಡಿದರೆ ಸಂಸ್ಕೃತ ಜೀವಿತ ಭಾಷೆ ಎನ್ನುವುದು ಅವರಿಗೆ ತಿಳಿಯುತ್ತದೆ' ಎಂದು ಅಭಿಪ್ರಾಯ ಪಟ್ಟಿದ್ದರು.

ಇತ್ತೀಚಿನ ದಿಗಳಲ್ಲಿ 'ಶಾಸ್ತ್ರಸಂವರ್ಧಿನೀ ಸಭಾ'ದ ಆಶ್ರಯದಲ್ಲಿ ನಡೆಯುವ ಈ ವಿದ್ವತ್ಸಭೆಯಲ್ಲಿ ಭಾಗವಹಿಸಿದ ಎಲ್ಲ ವಿದ್ವಾಂಸರಿಗೂ ಗೌರವಧನ ನೀಡುವುದರ ಜತೆಗೆ ನ್ಯಾಯ,ವ್ಯಾಕರಣ, ಮೀಮಾಂಸ ಮತ್ತು ವೇದಾಂತ ಶಾಸ್ತ್ರಗಳಲ್ಲಿ ಆಯ್ದ ವಿದ್ವಾಂಸರಿಗೆ ಪಾರಿತೋಷಕ ನೀಡಲಾಗುತ್ತದೆ. ಕೆಲವು ವರ್ಷಗಳಿಂದ ವ್ಯಾಕರಣ, ಮೀಮಾಂಸ, ವೇದಾಂತ ಮತ್ತು ತರ್ಕಶಾಸ್ತ್ರಗಳಲ್ಲಿ ಆಯ್ದ ನಾಲ್ಕು ಮಂದಿ ವಿದ್ವಾಂಸರಿಗೆ ಜಗದ್ಗುರುಗಳವರ ಸಮ್ಮುಖದಲ್ಲಿ ಬಂಗಾರದ ಉಂಗುರವನ್ನು ನೀಡಿ ಗೌರವಿಸಲಾಗುತ್ತದೆ. ಜಗದ್ಗುರುಗಳವರ ನಿರ್ದೇಶನದಂತೆ ಶ್ರೀ ಶಂಕರ ಅದ್ವೈತ ಶೋಧಕೇಂದ್ರದ ಆಶ್ರಯದಲ್ಲಿ ಈ ವಿದ್ವತ್ಸಭೆಯ ಕಲಾಪಗಳನ್ನೆಲ್ಲ ಪುಸ್ತಕರೂಪದಲ್ಲಿ ಅಚ್ಚುಹಾಕಿಸಿ ಎಲ್ಲ ವಿದ್ವಾಂಸರಿಗೂ ನೀಡಲಾಗುತ್ತದೆ. ಅನೇಕ ಸಂಸ್ಕೃತಸಂಶೋಧನ ಗ್ರಂಥಗಳನ್ನು ಈ ವಿದ್ವತ್‌ಸಭೆಯ ಅವಧಿಯಲ್ಲಿ ಅನಾವರಣಗೊಳಿಸಲಾಗುತ್ತದೆ. ಸಭೆಯಲ್ಲಿ ಭಾಗವಹಿಸಿದ ಎಲ್ಲ ವಿದ್ವಾಂಸರಿಗೂ ಅವರ ಅನುಷ್ಠಾನಾದಿಗಳಿಗೆ ತೊಂದರೆಯಾಗದಂತೆ ಉತ್ತಮವಸತಿ ಸೌಕರ್ಯ, ಪ್ರತ್ಯೇಕ ಭೋಜನ ವ್ಯವಸ್ಥೆ-ಇತ್ಯಾದಿಗಳನ್ನು ಏರ್ಪಡಿಸಿ, ಪ್ರಯಾಣವೆಚ್ಚ ನೀಡಿ ಆತ್ಮೀಯತೆಯಿಂದ ಬೀಳ್ಕೊಡಲಾಗುತ್ತದೆ.

ಹೀಗೆ ಶೃಂಗೇರಿ ಶ್ರೀಶಾರದಾಪೀಠದ ಮಹಾಗಣಪತಿ ವಾಕ್ಯಾರ್ಥವಿದ್ವತ್ಸಭೆಯು ಇಡೀ ದೇಶಕ್ಕೆ ಒಂದು ಮಾದರಿ. ನಮ್ಮ ದೇಶದ ಸಂಸ್ಕೃತ ವಿಶ್ವವಿದ್ಯಾಲಯಗಳು, ರಾಷ್ಟ್ರಮಟ್ಟದ ಅನೇಕ ಸಂಸ್ಕೃತ ಸಂಸ್ಥೆಗಳು ಮತ್ತು ಇತರ ಸಂಸ್ಕೃತಪರ ಸಂಘಟನೆಗಳಿಂದ ನಡೆಸಲಾಗದ ಇಂತಹ ಒಂದು ಅಮೋಘ ವಿದ್ವತ್ಸಭೆಯನ್ನು ಅದು ಆರಂಭವಾದಂದಿನಿಂದ ಪ್ರತಿವರ್ಷವೂ ಅವಿಚ್ಛಿನ್ನವಾಗಿ ನಡೆಸಿಕೊಂಡು ಬರುತ್ತಿರುವುದು ಸಂಸ್ಕೃತಾಭಿಮಾನಿಗಳೆಲ್ಲರೂ ಹೆಮ್ಮೆಪಡಬೇಕಾದ ವಿಷಯ.

(ಮುಗಿಯಿತು)

# 'ಚಾಟಿ - ಚಟಾಕಿ'-2

- ಮಾರ್ಪಳ್ಳಿ ಆರ್ ಮಂಜುನಾಥ್



"ಏನ್ರೀ ಪಾರ್ವತಮ್ಮ, ನನ್ನ ಮಗಳು ಸ್ಮೃತಿ ನಿನ್ನೆ TV ಯಲ್ಲಿ ಹಾಡಿದ್ದನ್ನು ನೋಡಿದ್ರಾ? ಹ್ಯಾಗೇ ಹಾಡಿದ್ಲು ? ನನಗೆ ದೃಷ್ಠಿ ಆಯ್ತು ಕಂಡ್ರಿ." ಹೌದು, ನಾನು ಪಾರ್ವತಮ್ಮನ ಮಗಳು TV ಚಾನಲ್‌ನಲ್ಲಿ ಹಾಡಿದ್ದನ್ನು ಕೇಳಿದ್ದೆ, ನೋಡಿದ್ದೆ ಪುಟ್ಟ, ಮುದ್ದಾದ ಹುಡುಗಿ, ಎಂಥ ಕಂಠ, ಎಂಥ ಹಾವಭಾವ. ಆದ್ರೆ ಅವಳು ಹಾಡಿದ್ದು ಮಾತ್ರ ವಯಸ್ಸಿಗೂ ಮೀರಿದ ಪ್ರೇಮಗೀತೆ. ಆ ಹುಡುಗಿಗೆ ಆ ಹಾಡಿನ ಅರ್ಥ ಗೊತ್ತಿದೆಯೋಇಲ್ಲವೋ? ತನ್ಮಯತೆಯಿಂದ, ಅದರಲ್ಲಿ ಲೀನವಾದಂತೆ ಕಾಣುತ್ತಿದ್ದಳು. ಆ ಹುಡುಗಿಯೊಬ್ಬಳೇ ಅಲ್ಲ ಆ ಪುಟ್ಟ ಹುಡುಗಿಯ ವಯಸ್ಸಿನ ಎಲ್ಲ ಎಳೆ ಮಕ್ಕಳ ಸಿರಿ ಕಂಠದಲ್ಲಿ ವಯಸ್ಸಿಗೆ ಮೀರಿದ ಸಿನಿಮಾ ಪ್ರೇಮಗೀತೆಯ ಹಾಡುಗಳು! ಅದಕ್ಕೆ ತಕ್ಕ ಹಾವಭಾವಗಳು. ಅದನ್ನು ಕಂಡು ಚಪ್ಪಾಳೆ ತಟ್ಟುವ ಪ್ರೇಕ್ಷಕ ವೃಂದ,ಮೆಚ್ಚುಗೆ ನುಡಿಯುವ ವಿಮರ್ಶಾತ್ಮಕ ನುಡಿ ಮುತ್ತುಗಳು.!

ಇದನ್ನು ನಾನು ತಪ್ಪು ಎಂದು ಹೇಳುತ್ತಿಲ್ಲ. ಆ ಮಕ್ಕಳ ರಾಗ, ಶುದ್ಧೋಚ್ಚಾರ ಹಾವಭಾವ ಎಲ್ಲವು ಪರಿಶುದ್ಧ, "ಬೆಳೆಯುವ ಸಸಿ-ಮೊಳಕೆಯಲ್ಲೆ' ಸಂಗೀತ ವಿದೂಷಿಗಳಾಗುವ ಎಲ್ಲಲಕ್ಷಣ, ಆದರೆ ಇಲ್ಲಿರುವ ಪ್ರಶ್ನೆಯೇ ಬೇರೆ ?

ಈ TV ಚಾನೆಲ್‌ಗಳಲ್ಲಿ ಎಳೆ ಪ್ರತಿಭೆಗಳನ್ನ ಗುರುತಿಸಿ, ಅವರಲ್ಲಿ ಆತ್ಮ ವಿಶ್ವಾಸ, ವೇದಿಕೆಯಲ್ಲಿ ನಿಂತು ಹೇಳುವ ಧೈರ್ಯ, ಬಾವದಲ್ಲಿ ಲೀನತೆ, ಎಲ್ಲವನ್ನು ಬೆಳಗಿಸುವ ನಿಲುವು ಪ್ರಶಂಸನೀಯ. ಆದರೆ ಆ ಎಳೆ ವಯಸ್ಸಿನ ಕಂಠದಲ್ಲಿ ವಯಸ್ಸಿಗೂ ಮೀರಿದ ಪುಂಕಾನುಪುಂಕ ಸಿನಿಮಾ ಹಾಡುಗಳ ಪ್ರೇಮಗೀತೆಗಳು ಎಷ್ಟೊಂದು ಔಚಿತ್ಯ? ಈ ಕಡೆಗೂ ಒಮ್ಮೆ ದೃಷ್ಠಿ ಹರಿಸಿದರೆ ಒಳ್ಳೆಯದಲ್ಲವೇ?

ಮಕ್ಕಳ ವಯೋಗುಣಕ್ಕೆ ಅನುಗುಣವಾಗಿ ಬರೆದ ಎಷ್ಟೊ ಕವನಗಳು, ಹಾಡುಗಳು ಇಂದು ಸಾಹಿತ್ಯ ಲೋಕದಲ್ಲಿ ಬರೆಯಲ್ಪಟ್ಟಿವೆ. ಅಂತಹ ಎಷ್ಟೊಂದು ಅಮೂಲ್ಯ ಕವನಗಳಿಗೆ ಹಾಡು ರಾಗ ಸಂಯೋಜನೆ ಮಾಡಿ ಆ ಎಳೆಕಂಠದಲ್ಲಿ ಹೊರಹೊಮ್ಮಿಸಿದರೆ ಹೇಗೆ? ಹೊಸ ಕವನಗಳು ಅಕ್ಷರದಿಂದ ಸಿರಿಯಲ್ಲಿ ಹೊರಬಂದು ಪ್ರೇಕ್ಷಕರ ಮನ ಸೂರೆಗೊಳ್ಳುವುದಿಲ್ಲವೇ? ಪುಸ್ತಕದ ಹಾಳೆಗಳಲ್ಲಿ ಮಲಗಿದ ಅಕ್ಷರಗಳಿಗೆ ಸಿರಿಕಂಠದಲ್ಲಿ ಜೀವತುಂಬಿ ಹಾವಭಾವದಲ್ಲಿ ಪ್ರಜ್ವಲಿಸಿದಾಗ ಹೊಸ ಆಯಾಮ ನೀಡುವುದಿಲ್ಲವೇ? ಎಷ್ಟೊಂದು ಕವಿಗಳ ಭಾವಕ್ಕೆ-ಧ್ವನಿಯಾಗಿ ಸಾಹಿತ್ಯ-ಸಂಗೀತದ ರಸದೌತಣಕ್ಕೆ ನಾಂದಿಯಾಗುವುದಿಲ್ಲವೆ?

ಇಲ್ಲಿ ಮತ್ತೊಂದು ದೃಷ್ಟಿಯು ಇದೆ. ಮಕ್ಕಳಿಗಾಗಿ-ಮಕ್ಕಳ ವಯೋಗುಣಕ್ಕೆ ಅನುಗುಣವಾಗಿ ಬರೆದ ಕಲ್ಪನೆ-ಬರಹ-ಸಾಹಿತ್ಯಕ್ಕೆ ಒಂದು ಸುವರ್ಣ ಅವಕಾಶ. ಇನ್ನಷ್ಟು ಬರೆಯಲು ಇರುವ ಕವಿಗಳಗೆ - ಬರುವ ಕವಿಗಳಿಗೆ ಸ್ಫೂರ್ತಿ ಸೆಲೆಯಾಗಬಹುದು. ಅಜ್ಞಾತವಾದ ಎಷ್ಟೊಂದು ಕವನಗಳಿಗೆ ಪುನರ್‌ಜನ್ಮ, ಕೇಳುವ ಕವಿಗಳಿಗೆ-ಹಾಡುವ ಧ್ವನಿಗಳಿಗೆ, ಸಂಗೀತ ಕಲಿಸುವ ಮನಗಳಿಗೆ ಔತಣದ ಆಹ್ವಾನವಾಗದೆ?

ಮಕ್ಕಳ ವಯೋಮಾನಕ್ಕೆಹಾಡುವ ಕವನಗಳಾದ್ದರಿಂದ-ಅದರಲ್ಲಿ ಮಕ್ಕಳ ಪ್ರವೇಶಕಾಯ ಸುಲಭ-ಸಂದರ್ಭೋಚಿತ, ಕವನದ ಅರ್ಥ-ಧ್ವನಿಯಲ್ಲಿ ಮಿಳಿತವಾಗಿ ಪ್ರೇಕ್ಷಕನ ಚಪ್ಪಾಳೆ, ಪೋಷಕರ ಶಹಭಾಷ್‌ಗಿರಿ, ಮೆಚ್ಚುಗೆ ಎಲ್ಲವೂ ಸಹ್ಯವಾದೀತು.

ಆದರೆ ಈ ಸಾಹಸಕ್ಕೆ ಯಾರು ಬರುತ್ತಾರೆ ಮುಂದೆ? ಮಾಧ್ಯಮದವರೇ? ಆಯೋಜಕರೇ? ಸಂಘ ಸಂಸ್ಥೆಗಳೇ? ಹಣ ಹೂಡುವವರೇ? ಹೊಸ ಮನಸ್ಸಿನ ಸಾಹಿತ್ಯಕಾಂಕ್ಷಿಗಳೇ? ಉತ್ತರವಿಲ್ಲ. ಅವರ ಮೇಲೆ ಇವರು, ಇವರ ಮೇಲೆ ಅವರು. ಬೆಕ್ಕಿಗೆ ಗಂಟೆ ಕಟ್ಟುವವರಾರು? ಇದು ಯಾರಿಗೆ ಬೇಕು?

ಅಯ್ಯೋ ಸ್ವಾಮಿ, ನಾನು ಜನಪ್ರಿಯವಾದ ಸಿನಿಮಾ ಹಾಡುಗಳನ್ನು ಹಾಡಬಾರದೆಂದು ಹೇಳುತ್ತಿಲ್ಲ. ಆದರೆ ಆ ಹಾಡುಗಳು ಮಕ್ಕಳ ವಯೋಮಾನಕ್ಕೆ ತಕ್ಕಂತೆ ಇರಲಿ. ಅಂತಹ ಸಿನಿಮಾ ಹಾಡಿನೊಂದಿಗೆ-ಮಕ್ಕಳಸಾಹಿತ್ಯದಲ್ಲಿನ ಕವನಗಳನ್ನು ಆಯ್ದುಕೊಂಡು ಸಂಗೀತ ನಿರ್ದೇಶನ ನೀಡಲಿ-ಹಾಡಿಸಲಿ.

ಇಲ್ಲಿ ಮಕ್ಕಳಿಗೂ ಹೊಸ ಹೊಸದಾಗಿ ಕಲಿಯುವ ಅವಕಾಶ, ಕಲಿಸುವವರಿಗೂ ಅವಕಾಶ, ಹೊಸ ಹೊಸ ಟ್ಯೂನ್‌ಗಳಿಗೆ ಅವಕಾಶ-ಅವಕಾಶಗಳ ಹೊಸ ಮನ್ವಂತರವಾಗಲಿ.

ಸಲಹೆಯನ್ನು ಒಪ್ಪಲು ಇದೇನು ಕಾನೂನೇ? ಇದು ಅವರ ಮೂಗಿನ ನೇರವೆನ್ನಬಹುದು. ನಿಜ ಈ ಸಲಹೆಯನ್ನೇ ಅವರವರ ಮೂಗಿನ ನೇರಕ್ಕೆ ತೆಗೆದುಕೊಂಡಾಗ ಒಂದಿಷ್ಟು ಬದಲಾವಣೆಯೊಂದಿಗೆ ಜಾರಿಗೆ ತಂದರೆ ಒಂದು ಹೊಸ ಯೋಜನೆ ಹುಟ್ಟಬಹುದಲ್ಲವೇ?

ಇನ್ನೊಂದು ವಿಷಯ. ಎಷ್ಟೋ ರಾಷ್ಟ್ರೀಯ ಹಬ್ಬ, ಹರಿದಿನಗಳಲ್ಲಿ, ಕಾರ್ಯಕ್ರಮಗಳಲ್ಲಿ, ಶಾಲೆಯ ವಾರ್ಷಿಕೋತ್ಸವಗಳಲ್ಲಿ ಸಿನೆಮಾ ಕ್ಯಾಸೆಟ್‌ಗಳನ್ನು ಹಾಕಿ ಅದಕ್ಕೆ ಕುಣಿಯುವ, ನೃತ್ಯ ಮೂಡಿಸುವ ಬೆಳವಣಿಗೆಗಳು ಹೆಚ್ಚಾಗುತ್ತಿವೆ. ಕ್ಯಾಸೆಟ್‌ನ ರೆಡಿಮೇಡ್ ಹಾಕಿದ ಹಾಡುಗಳು ಮನೆಯಲ್ಲಿ ಗುಣುಗಿಕೊಳ್ಳಲು ಹಾಕಿರಿ, ಆದರೆ ಬಹಿರಂಗ ಕಾರ್ಯಕ್ರಮಗಳಲ್ಲಿ ಕ್ಯಾಸೆಟ್ ಸಂಸ್ಕ್ರತಿಗೆ ವಿರಾಮ ನೀಡಿ. ಹೊಸ ಹೊಸ ದೇಶಗೀತೆ, ಭಕ್ತಿಗೀತೆ,ಸಾಂಸ್ಕ್ರತಿಕ ಗೀತೆ, ಭಾವಗೀತೆಗಳಿಗೆ ಅವಕಾಶವಿರಲಿ. ಆ ಹಾಡುಗಳ ರಾಗ ಸಂಯೋಜನೆ, ಗಾಯನಗಳು ನೃತ್ಯಗಳು ನಮ್ಮ ಪ್ರೇಕ್ಷರಿಗೂ ತಲುಪಲಿ.

ಶಾಲೆಯ ಶಿಕ್ಷಕರಿಗೂ-ಸಂಗೀತ ಕಲಿಸುವ ಶಿಕ್ಷಕರಿಗೂ ಹೊಸ ಹೊಸ ಅವಕಾಶ ಛಾಲೆಂಜ್ ಹುಟ್ಟಿ ಬರಲಿ. ಏಕೆ ನಮ್ಮ ಕಣ್ಣಿಗೆ-ಮನಸ್ಸಿಗೆ-ಹೃದಯಕ್ಕೆ ಆನಂದ-ಸಂತೋಷ ಸಿಗುವುದಿಲ್ಲವೆ ? ನೋಡಿಯೋ ಬಿಡೋಣಾ ಎನ್ನುವ ಕಡೆಗೆ ಹೆಜ್ಜೆ ಹಾಕಬಾರದೇಕೆ?

ಎಂದೂ ಹೊಸ ಪ್ರಯತ್ನಕ್ಕೆ-ಬದಲಾವಣೆಗೆ ಕೈ ಹಾಕುವ ದಿಟ್ಟರು ನಮ್ಮಲ್ಲಿದ್ದಾರೆ. ಆದರೇಕೊ ಅವರುಗಳು ಮನಸ್ಸು ಮಾಡುತ್ತಿಲ್ಲ. ಜಾಗೃತಿಗೊಳಿಸಲು ಯಾರು ಬರುತ್ತಾರೆ ಎಂದು ಕಾದು ನೋಡುವುದೇಕೆ? ನಾವೇ-ನಮ್ಮಿಂದಲೇ ಪ್ರಾರಂಭವಾಗಲಿ.

ನಾವು ಮಕ್ಕಳಿಗಾಗಿ-ಅವರ ವಯೋಗುಣಕ್ಕೆ ತಕ್ಕಂತೆ ಬರೆದ ಕಾವ್ಯ-ಕವನಗಳನ್ನು ಹಾಡಿಸುವ ಸ್ಪರ್ಧೆ ಇರಿಸೋಣಾ, ಬಹುಮಾನವನ್ನು ಇರಿಸೋಣಾ, ಅಂತೆಯೇ ಮಕ್ಕಳಿಗಾಗಿ ಬರೆದ ಮಹನೀಯರ ಹಾಡುಗಳನ್ನು ಹಾಡಿಸಲು ರಂಜಿಸಲು ಮುಂದಾಗೋಣ.

ಹೊಸ ಬದಲಾವಣೆಯಿಂದ ಮಕ್ಕಳು ಹೊಸ ಹಾಡುಗಾರರಾಗಿ ಹುಟ್ಟಿ ಬರುತ್ತಾರೆ. ಕವನ ಪರಿಚಯವಾಗುತ್ತದೆ. ಕವಿಗಳು ಮಕ್ಕಳಿಗಾಗಿ ಬರೆಯುವ ಕಾತರ, ತುಡಿತ ಉಂಟಾಗಿ ಹೊಸ ಹೊಸ ಕವನಗಳು ರಚನೆಯಾಗುತ್ತವೆ.

ಮಾಧ್ಯಮದವರೇ, ಛಾನಲ್ ದೂರದರ್ಶನದವರೇ, ಶಾಲಾ ವಾರ್ಷಿಕೋತ್ಸವ ನಡೆಸುವ ಶಿಕ್ಷಕರೇ, ರಾಷ್ಟ್ರೀಯ ಹಬ್ಬದ ಸಮಿತಿಯವರೇ, ಮಕ್ಕಳ ಭವಿಷ್ಯಕ್ಕಾಗಿ, ಸಾಹಿತ್ಯದ ಉಳಿವಿಗಾಗಿ, ಹೊಸ ಬದಲಾವಣೆಗೆ ಹೆಜ್ಜೆ ಇರಿಸುವಿರಾ?

ಛೇ, ನಿಮ್ಮನ್ನು ಕೇಳುವ ಮೊದಲು ಬದಲಾವಣೆ ಮಾಡಿ ತೋರಿಸೋಣಾ ಎಂದರೆ ನಾನೊಬ್ಬನೆಯಾಗುತ್ತೇನಲ್ಲ. ತಾಳಿ, ಯಾರನ್ನಾದರೂ ಜೊತೆಗೂಡಿ ಸಂಘಟನೆಯೊಂದಿಗೆ ನನ್ನ ಪ್ರಯತ್ನ ಕಾರ್ಯರೂಪಕ್ಕೆ ತರುತ್ತೇನೆ. ಅಷ್ಟರೊಳಗಾಗಿ ನಿಮಗೆ ಇದು ಸರಿಯೆನಿಸಿದರೆ, ನೀವೇ ಪ್ರಯತ್ನಿಸಿ ಯಶಸ್ವಿಯಾಗಿರಿ. ನಾನು ನಿಮ್ಮೊಡನೆ ಕೈಗೂಡಿಸುತ್ತೇನೆ. ನಮ್ಮ ಚಾಟಿ-ಚಟಾಕಿ ಏನು ಮಾಡದೇ ಟುಸ್ಸ್ ಆಗುವುದು ಬೇಡ.

# ವೇದಗಣಿತದ ಪರಿಚಯ-2

-ಸಿ.ಎಸ್.ರಾವ್
ವಿಶ್ರಾಂತ ಡಿ.ಜಿ.ಎಮ್., ಕಾರ್ಪೋರೇಶನ್ ಬ್ಯಾಂಕ್



(ಹಿಂದಿನ ಸಂಚಿಕೆಯಿಂದ...)

ಉದಾಹರಣೆ 1:

1. **ಪ್ರಶ್ನೆ : 111 111 ಉತ್ತರ : 12321**
ಪ್ರಶ್ನೆಯನ್ನು ನೋಡಿ, ಒಂದೇ ರೀತಿಯ ಅಂಕೆ ಇದೆ. ಇದಕ್ಕೆ ಉತ್ತರ ನೋಡಿ 1ರಿಂದ 3ರ ವರೆಗೆ ಆರೋಹಣ 3ರಿಂದ 1ರ ವರೆಗೆ ಅವರೋಹಣ. ಪ್ರಶ್ನೆಯಲ್ಲಿ ಆರು ಅಂಕೆ, ಉತ್ತರದಲ್ಲಿ ಒಂದು ಅಂಕೆ ಕಮ್ಮಿ.

2. **ಪ್ರಶ್ನೆ : 11111 11111 ಉತ್ತರ : 123454321**

3. **ಪ್ರಶ್ನೆ : 1111 111 ಉತ್ತರ : 123321**
ಎರಡು ಬದಿಯ ಸಂಖ್ಯೆಗಳನ್ನು ನೋಡಿ ಒಂದು ಬದಿಯಲ್ಲಿ 3 ಸಂಖ್ಯೆ, ಇನ್ನೊಂದು ಬದಿಯಲ್ಲಿ 4 ಸಂಖ್ಯೆ, ಒಟ್ಟಿಗೆ 7 ಸಂಖ್ಯೆ, ಹಾಗಾಗಿ ಉತ್ತರ ಆರು ಸಂಖ್ಯೆ. ಕಮ್ಮಿ ಇರುವ ಸಂಖ್ಯೆ 3 ಹಾಗಾಗಿ ಉತ್ತರದಲ್ಲಿ 3 ಸಂಖ್ಯೆ ತನಕ ಆರೋಹಣ ಆಮೇಲೆ ಅವರೋಹಣ. ಆದರೆ ಉತ್ತರ ಆರು ಸಂಖ್ಯೆಯದ್ದು. ಆದುದರಿಂದ ಆರೋಹಣದ ಕೊನೆಯ ಸಂಖ್ಯೆಯನ್ನು ಪುನಃ ಬರೆಯಬೇಕು. (ಒಟ್ಟು ಉತ್ತರ ಆರು ಸಂಖ್ಯೆಯನ್ನು ಆದುದರಿಂದ) ಕೆಳಗಿನ ಗಣಿತವನ್ನು ನೋಡಿ.

4. **ಪ್ರಶ್ನೆ : 111 1111111 ಉತ್ತರ : 123333321**

5. **ಪ್ರಶ್ನೆ : 1111111 111111111 ಉತ್ತರ : 123456777654321**

ಉದಾಹರಣೆ 2:

1. **ಪ್ರಶ್ನೆ : 12345 11 ಉತ್ತರ : 135795**
ಇಲ್ಲಿ ಮೊದಲು ಪ್ರಶ್ನೆಯ ಕೊನೆಯ ಅಂಕೆಯನ್ನು ಮೊದಲು ಬರೆಯಬೇಕು. ಅದು 5, ಆಮೇಲೆ ಈ ಅಂಕೆಗೆ ಅದರ ಮೊದಲಿನ ಅಂಕೆಯನ್ನು ಕೂಡಿಸಿ ಬರೆಯಿರಿ. ಅದು 5+4=9, ಆಮೇಲೆ 4 ಮತ್ತು ಅದರ ಮೇಲಿನ ಅಂಕೆ 3ನ್ನು ಕೂಡಿಸಿ ಬರೆಯಿರಿ. ಅದು 4+3=7, ಇದೇ ರೀತಿ 3+2=5, 2+1=3 ಮತ್ತೆ ಮೊದಲಿನ ಅಂಕೆಯಾದ 1ನ್ನು ಬರೆಯಿರಿ. ಹಾಗೆ ಉತ್ತರ=135795

2. **ಪ್ರಶ್ನೆ : 34321 11 ಉತ್ತರ : 377531** ಮೇಲಿನಂತೆಯೇ ಲೆಕ್ಕ ಮಾಡಿ

3. **ಪ್ರಶ್ನೆ : 3743 11 ಉತ್ತರ : 41173**
ಮೇಲೆ ಹೇಳಿದಂತೆ ಮೊದಲು 3 ಆಮೇಲೆ 4+3=7, 7+4=11. ಇದರಲ್ಲಿ 1ನ್ನು ಬರೆಯಿರಿ, 1ನ್ನು ಮುಂದಿನ ಉತ್ತರದಲ್ಲಿ ಸೇರಿಸಿ 1+3=4 ಹಾಗಾಗಿ ಉತ್ತರ-41173

*ಈಗ ನಾವು ವೇದಗಣಿತದ ಒಂದೊಂದೆ ಸೂತ್ರವನ್ನು ನೋಡೋಣ :*
ಮೊದಲ ಸೂತ್ರ-ಏಕಾದೀಕೇನ ಪೂರ್ವೇಣ, एकाधिकेन पूर्वेण, ( )
ಉದಾಹರಣೆ 3:

1. **ಪ್ರಶ್ನೆ : 21 21 ಉತ್ತರ : 441**
ಇಲ್ಲಿ ಯಾವಾಗಲೂ ಮೊದಲ ಅಂಕೆಯನ್ನು ಹಾಗೆಯೇ ಬರೆಯಬೇಕು. ಅದು-1, ಆಮೇಲೆ ಆ ಅಂಕೆಗೆ 1ನ್ನು ಸೇರಿಸಬೇಕು. ಅದು 21ಕ್ಕೆ ಸೇರಿಸಿದರೆ 22. ಅದನ್ನು ಎರಡನೆ ಅಂಕೆಯಿಂದ ಗುಣಿಸಬೇಕು-22 2=44. ಉತ್ತರ=44 ಮತ್ತು 1 =441

2. **ಪ್ರಶ್ನೆ : 41 41** ಮೇಲಿನ ಸೂತ್ರದಂತೆಯೇ **ಉತ್ತರ :** 1681 (41+1=42 4=168 ಮತ್ತು ಮೊದಲಿನ ಅಂಕೆ 1)

3. **ಪ್ರಶ್ನೆ : 51 51 ಉತ್ತರ : 2601** (ಮೇಲಿನಂತೆಯೇ ಮಾಡಿ)

4. **ಪ್ರಶ್ನೆ : 91 91 ಉತ್ತರ : 8281**

5. **ಪ್ರಶ್ನೆ : 121 121 ಉತ್ತರ : 14641**

6. **ಪ್ರಶ್ನೆ : 61 61 ಉತ್ತರ : 3721**

7. **ಪ್ರಶ್ನೆ : 111 111 ಉತ್ತರ : 12321**

ಉದಾಹರಣೆ 4:
ಕೊನೆಯ ಅಂಕೆ 2ರಿಂದ ಕೊನೆಗೊಳ್ಳುವುದಾದರೆ ಹೇಗೆ?

1. **ಪ್ರಶ್ನೆ : 22 22 ಉತ್ತರ : 484**
ಮೊದಲ ಅಂಕೆಯನ್ನು ಮೊದಲ ಅಂಕೆಯಿಂದ ಗುಣಿಸಿ ಬರೆಯಬೇಕು. 2 2=4. ಆಮೇಲೆ ಆ ಪೂರ್ಣ ಅಂಕೆಗೆ ಅಂದರೆ 22ಕ್ಕೆ 2ನ್ನು ಕೂಡಿಸಿ= 22+2=24. ಅದನ್ನು 2ನೇ ಅಂಕೆಯಿಂದ ಗುಣಿಸಬೇಕು. 24 2=48. ಹಾಗಾಗಿ ಉತ್ತರ 48 ಮತ್ತು 4 = 484.

2. **ಪ್ರಶ್ನೆ : 52 52 ಉತ್ತರ : 2704** (ಮೇಲಿನ ಉದಾಹರಣೆಯಂತೆ 2 2=4, 52+2 5=270,=2704)

3. **ಪ್ರಶ್ನೆ : 82 82 ಉತ್ತರ : 82(+2) 82=6724**

4. **ಪ್ರಶ್ನೆ : 122 122 ಉತ್ತರ : 122(+2) 122=14884**

5. **ಪ್ರಶ್ನೆ : 152 152 ಉತ್ತರ : 152(+2) 152=23104**

ಉದಾಹರಣೆ 5:
ಕೊನೆಯ ಅಂಕೆ 3ರಿಂದ ಕೊನೆಗೊಳ್ಳುವುದಾದರೆ ಹೇಗೆ?

1. **ಪ್ರಶ್ನೆ : 33 33 ಉತ್ತರ : 33 33=33(+3) 33=108/9=1089**
ಹಿಂದೆ ಹೇಳಿದ ಉದಾಹರಣೆಯ ಹಾಗೆ ಮೊದಲಿನ ಅಂಕೆಯನ್ನು 2ನೇ ಮೊದಲ ಅಂಕೆಯಿಂದ ಗುಣಿಸಿ 3 3=9. ಆಮೇಲೆ 33+3ನ್ನು ಕೂಡಿಸಿ ಎರಡನೇಯ 3ರಿಂದ ಗುಣಿಸಿ=108. ಹಾಗಾಗಿ ಉತ್ತರ=1089.

2. **ಪ್ರಶ್ನೆ : 53 53 ಉತ್ತರ : 53(+3) 53=56 5=280, 3 3=9, =2809**
3. **ಪ್ರಶ್ನೆ : 73 73 ಉತ್ತರ : 73(+3) 73=76 7=532, 3 3=9, =5329**
4. **ಪ್ರಶ್ನೆ : 93 93 ಉತ್ತರ : 93(+3) 93=96 9=864, 3 3=9, =8649**

ಉದಾಹರಣೆ 6:
ಇಲ್ಲಿ 2 ಬದಿಯಲ್ಲಿ ಕೊನೆಯ ಅಂಕೆ 5 ಇದ್ದರೆ (5,5) ಸೀದ ಮೊದಲು ಕೊನೆಯ ಎರಡು ಅಂಕೆಯನ್ನು '25' ಅನ್ನು ಬರೆಯುವುದು. ಆಮೇಲೆ ಕೊನೆಯ ಒಂದು ಅಂಕೆಯನ್ನು '5'ನ್ನು ಬಿಟ್ಟು ಎರಡು ಬದಿಯಲ್ಲಿ ಒಟ್ಟು ಉಳಿದ ಅಂಕೆಗೆ ಒಂದು ಬದಿಯಲ್ಲಿ '1'ನ್ನು ಸೇರಿಸಿ ಗುಣಿಸುವುದು.


1. **ಪ್ರಶ್ನೆ : 1025 1025** ಇದರಲ್ಲಿ ಕೊನೆಯ ಅಂಕೆ 5 5=25. ಉಳಿದ ಅಂಕೆ 102(+1) 102=10506 (102ಕ್ಕೆ ಒಂದನ್ನು ಸೇರಿಸಿ 102ರಿಂದ ಗುಣಿಸಬೇಕು) 1025 1025 ಇದರ **ಉತ್ತರ : 1050625**
2. **ಪ್ರಶ್ನೆ : 35 35 ಉತ್ತರ : (5 5=25) (3+1 3=12) =1225**
3. **ಪ್ರಶ್ನೆ : 85 85 ಉತ್ತರ : (25) (8+1 8=72) =7225**
3. **ಪ್ರಶ್ನೆ : 15 15 ಉತ್ತರ : (25) (1+1 1=2) =225**
4. **ಪ್ರಶ್ನೆ : 95 95 ಉತ್ತರ : (25) (9+1 9=90) =9525**
5. **ಪ್ರಶ್ನೆ : 125 125 ಉತ್ತರ : (25) (12+1 12=156) =15625**
6. **ಪ್ರಶ್ನೆ : 1005 1005 ಉತ್ತರ : (25) (100+1 100=10100) =1010025**
7. **ಪ್ರಶ್ನೆ : 25 25 ಉತ್ತರ : (25) (2+1 2=6) =625**
8. **ಪ್ರಶ್ನೆ : 65 65 ಉತ್ತರ : (25) (6+1 6=42) =4225**
9. **ಪ್ರಶ್ನೆ : 55 55 ಉತ್ತರ : (25) (5+1 5=30) =3025**
10. **ಪ್ರಶ್ನೆ : 75 75 ಉತ್ತರ : (25) (7+1 7=56) =5625**

ಇಲ್ಲಿ ನಾವು ಎರಡು ಬದಿಯು ಒಂದೇ ರೀತಿಯ ಅಂಕೆಯನ್ನು ನೋಡಿದ್ದೇವೆ. ಅದೇ ರೀತಿಯಲ್ಲಿ ಕೊನೆಯಲ್ಲಿ '0' ಬರುವಲ್ಲಿಯೂ ಉಪಯೋಗಿಸಬಹುದು. ತಿಂಗಳ ಪ್ರಶ್ನೆ - 888880881 ಎಷ್ಟರಿಂದ ಭಾಗಿಸಿದರೆ ಉತ್ತರ ಬರುತ್ತದೆ ? (ಉತ್ತರ ನಿರೀಕ್ಷಿಸಿ)

(ಮುಂದುವರಿಯುವುದು)

# ಕನ್ನಡ ಕವಿಕಾವ್ಯ ಪರಿಚಯ-೩ : ವರಕವಿ ಮುದ್ದಣ

- ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.



ರಾಮಶ್ವಮೇಧಂ:- ಕವಿ ಮುದ್ದಣನ ವ್ಯಕ್ತಿತ್ವವನ್ನು ಅವನ ಕೀರ್ತಿ ಪತಾಕೆಯೊಂದಿಗೆ ಮುಗಿಲೆತ್ತರಕ್ಕೆ ಹಾರಿಸಿದ ಕೃತಿಯೇ "ರಾಮಾಶ್ವಮೇಧಂ" ಎಂಬ ಹಳೆಗನ್ನಡ ಕೃತಿ. ತನ್ನ ಮನಸ್ಸನ್ನು ಹಿಂದಿನ ಕಾಲಕ್ಕೆ ಕೊಂಡೊಯ್ದು ಆ ಕಾಲದಲ್ಲಿ ಕನ್ನಡ ಭಾಷೆಯ ಬಳಕೆ ಹೇಗಿತ್ತು ಎಂಬುದನ್ನು ಊಹಿಸಿಕೊಂಡು ಕವಿ ತನ್ನ ಈ ಕೃತಿಯನ್ನು ರಚಿಸಿದನು. ಇದೊಂದು "ಕಾಂತಾ ಸಮ್ಮಿತ" ಕಾವ್ಯವಾಗಿದೆ. ಪತಿಯು ತನ್ನ ಪತ್ನಿಗೆ ಕತೆಯನ್ನು ಹೇಳಿದ ಶೈಲಿಯಲ್ಲಿ ಕವಿ ಈ ಕೃತಿಯನ್ನು ರಚಿಸಿರುವನು. ಸಂಸ್ಕೃತವನ್ನು ಚೆನ್ನಾಗಿ ಅರಿಯದಿದ್ದ ಮುದ್ದಣನು ಮೂಲ ಸಂಸ್ಕೃತದ ಪದ್ಮ ಪುರಾಣದಲ್ಲಿ ಕಂಡು ಬರುವ ಈ ಕಥೆಯನ್ನು ತನ್ನ ಗುರುಗಳಿಂದ ಓದಿಸಿ, ಕೇಳಿ ತಿಳಿದುಕೊಂಡು ಕನ್ನಡದಲ್ಲಿ ರಚಿಸುವ ತಿರ್ಮಾನವನ್ನು ಕೈಗೊಂಡನು. ಇತ್ತ ಮೊದಲೇ ತನಗೆ ಸಂಪೂರ್ಣವಾಗಿ ಮುಖೋದ್ಗತವಾಗಿದ್ದ ಲಕ್ಷ್ಮೀಶ ಕವಿಯ ಜೈಮಿನಿ ಭಾರತದ ಸೀತಾ ಪರಿತ್ಯಾಗ ಭಾಗವು ಕವಿಯ ಕಿವಿಯಲ್ಲಿ ಗುಂಯ್‌ಗುಡುತ್ತಿತ್ತು. ಇವೆಲ್ಲವನ್ನೂ ಸೇರಿಸಿ ಕವಿ, ತನ್ನ ಗುರುಗಳ ಮಾರ್ಗದರ್ಶನದಂತೆ ಹಳಗನ್ನಡ ಗದ್ಯ ಶೈಲಿಯಲ್ಲಿ ಈ ಕಾವ್ಯವನ್ನು ಬರೆಯ ತೊಡಗಿದನು. ಇದಕ್ಕೆ "ಮುದ್ದಣ-ಮನೋರಮೆ"ಯರ ಸರಸಸಲ್ಲಾಪವೆಂಬ ಚೌಕಟ್ಟಿನ ಸುಂದರವಾದ ಮಾತಿನ ಮಂಟಪವನ್ನು ಕಟ್ಟಿ ಸಿಂಗರಿಸಿ, ಕಾವ್ಯವನ್ನು ಅತ್ಯಂತ ಆಕರ್ಷಕವಾಗಿ ಮಾಡಿದ್ದಾನೆ ಕವಿ ಮುದ್ದಣ. ಆರಂಭದಲ್ಲಿಯೇ ಬರುವ ಮಳೆಗಾಲದ ವರ್ಣನೆಯಂತೂ ಅದ್ಭುತವಾಗಿದೆ. ಇಂತಹ ಮಳೆಗಾಲದಲ್ಲಿ ಒಂದು ದಿನ ಕವಿಗಳ "ಬಲ್ಲಹ" ನಾದ ಮುದ್ದಣನು ಅರಮನೆಯಿಂದ ಹೊರಟು ಸಮಿಪದ ಬೀದಿಯನ್ನು ಹಿಡಿದು ತನ್ನ ಮನೆಗೆ ಬಂದಾಗ ಆತನ ಮಡದಿ ಮನೋರಮೆಯು ದೂರದಿಂದಲೇ ಕಂಡು ಎದ್ದು ಹೋಗಿ ಅವನ ಕೈಹಿಡಿದು ಕರೆತಂದು ಕಾಲು ತೊಳೆಯಲು ನೀರನ್ನಿತ್ತು, ಒಳಗೆ ಕರೆದೊಯ್ದು, ಮಣೆಯಿತ್ತು ಕುಳ್ಳಿರಿಸಿ, ತನಿವಣ್ಣಲ್ಲಗಳನ್ನು ತಿನ್ನಲು ಕೊಟ್ಟು, ಕುಡಿಯಲು ಕೆನೆವಾಲನ್ನು ಕೊಟ್ಟು, ಉಪಚರಿಸಿದಳು, ಈ ಉಪಚಾರದಿಂದಾಗಿ ಆತನ ಹಸಿವು-ಆಯಾಸಗಳು ಮಾಯವಾಗಲು, ಸುಖಸಲ್ಲಾಪದಿಂದ ಕಾಲಕಳೆಯುತ್ತಾ, ಮಡದಿಯಾದ ಮನೋರಮೆಯು ತನ್ನ ಪತಿಯೊಂದಿಗೆ "ಹಗಲಿರುಳು ಸುರಿಯುತ್ತಿರುವ ಈ ಮಳೆಯಿಂದಾಗಿ ಮನಸ್ಸಿನಲ್ಲೆ ತುಂಬಾ ಬೇಸರ ಮಡುಕಟ್ಟಿದೆ; ಮನದ ಸಂತೋಷಕ್ಕಾಗಿ ಏನಾದರೊಂದು ಒಳ್ಳೆಯ ಕತೆಯನ್ನು ಹೇಳು" ಎನ್ನುತ್ತಾಳೆ ಯಾವ ಕಥೆ ಆಗಬೇಕೆಂಬ ಬಗ್ಗೆ ಅವರಲ್ಲಿ ಚರ್ಚೆ ನಡೆದು ಕೊನೆಗೆ ಮನೋರಮೆಯು ಶ್ರೀರಾಮಂ ಅಶ್ವಮೇಧಮಂ ಕೈಕೊಂಡ ನೆಂಬರಲ್ತೆ ? ಆ ಕತೆಯೇ ಅಕ್ಕು ಎನ್ನುತ್ತಾಳೆ. ಇದುವೇ ಶೇಷರಾಮಾಯಣವೆಂದು ಕರೆಯಲ್ಪಡುತ್ತದೆ. ಮೊದಲು ಇದನ್ನು ಶೇಷನು ವಾತ್ಸಾಯನನಿಗೆ ಹೇಳಿದ್ದರಿಂದ ಇದಕ್ಕೆ ಶೇಷರಾಮಾಯಣವೆನ್ನುವರು, ಕತೆಯನ್ನು ಗದ್ಯ ಶೈಲಿಯಲ್ಲಿ ಹೇಳುವುದೋ? ಪದ್ಯದಲ್ಲಿ ಹೇಳುವುದೋ ಎಂದು ಮುದ್ದಣನು ಕೇಳಲು ಮನೋರಮೆಯು "ಪದ್ಯಂ ವಧ್ಯಂ, ಗದ್ಯಂಹೃದ್ಯಂ; ಹೃದ್ಯಮಪ್ಪ ಗದ್ಯದೊಳೇ ಪೇಳ್ವುದು" ಎನ್ನುತ್ತಾಳೆ, ಹೀಗಿರುವ ಕತೆಯನ್ನು ಹೇಳಿದರೆ ಅರಮನೆಯವರು ತನಗೆ ರನ್ನ ಕಡಗವನ್ನೂ, ಹೊನ್ನ ಕಂಠಿಕೆಯನ್ನೂ ಉಡುಗೊರೆಯಾಗಿ ಕೊಡುತ್ತಾರೆ. ನೀನು ನನಗೆ ಏನನ್ನು ಕೊಡುತ್ತಿ? ಎಂದುಮುದ್ದಣನು ಕೇಳಲು ಪ್ರಶ್ನೆ "ನಿನ್ನ ಕತೆಯ ತಿರುಳು ಎಂತಿದೆಯೆಂಬುದನ್ನು ತಿಳಿದು, ನನಗೆ ತೋಚಿದಂತೆ ಉಡುಗೊರೆಯನ್ನು ಕೊಡುತ್ತೇನೆ" ಎನ್ನುತ್ತಾಳೆ ಮನೋರಮೆ.

ಹೀಗೆ ಸರಸಸಲ್ಲಾಪದಿಂದಲೇ ಆರಂಭವಾದ ಕಥೆಯು ಬಹಳ ಮನೋಜ್ಞವಾಗಿ ಸಾಗುತ್ತದೆ. ಕತೆಯ ಮಧ್ಯದಲ್ಲಿ, ಅಲ್ಲಲ್ಲಿ ಸತಿಪತಿಯರ ವೈಯಕ್ತಿಕ ಸಂಭಾಷಣೆಯ ಸಿಹಿಯಾದ ಹೂರಣವು ಓದುಗರ ಚಿತ್ತವನ್ನು ಅಪಹರಿಸುತ್ತದೆ. ಅರಣ್ಯಕನೆಂಬ ಮುನಿಯ ಆಶ್ರಮದ ಸಮೀಪಕ್ಕೆ ಶ್ರೀರಾಮನ ಯಾಗದ ಕುದುರೆ ಮತ್ತು ಶತ್ರುಘ್ನನ ಸಾವಿರಾರು ಸೈನಿಕರ ತಂಡವು ಬಂದಾಗ ಆ ಮುನಿಯು ಶತ್ರುಘ್ನನ ಸಾವಿರ ಸಾವಿರ ಸೈನಿಕರನ್ನು ಸೂಕ್ತವಾಗಿ, ರಾಜೋಚಿತವಾಗಿ ಉಪಚರಿಸಿ ತೃಪ್ತಿ ಪಡಿಸಿದನು ಎಂದು ಕವಿ ಹೇಳುತ್ತಾನೆ. ಆಗ ಮನೋರಮೆಯು "ಆತಿಥ್ಯ ಮೆಂದೊಡೇಂ? ಬರಿಯ ಬಾಯುಪಚಾರಮೇ?" ಎಂದು ಕೇಳುತ್ತಾಳೆ. ಅದಕ್ಕೆ ಕವಿ "ತನ್ನಾಶ್ರಮದ ಸನಿಹಕ್ಕೆ ಬಂದಿರುವ ಸಾವಿರಗಟ್ಟಳೆಯ ಸೈನಿಕರನ್ನು ಉಚಿತವಾದ ತಿಂಡಿ ಊಟ-ಉಪಚಾರಾದಿಗಳು, ನೂತನ ವಸ್ತ್ರಾಭರಣಾದಿಗಳಿಂದ ಅರಣ್ಯಕ ಮುನಿ ಸತ್ಕರಿಸಿದನು" ಎನ್ನುತ್ತಾನೆ. "ಕಾಡಿನಲ್ಲಿ ಆಶ್ರಮ ಕಟ್ಟಿಕೊಂಡು ವಾಸವಾಗಿರುವ ಬಡ ಮುನಿಗಳು ಇದ್ದಕ್ಕಿದ್ದಂತೆಯೇ ಸಾವಿರಾರು ಮಂದಿಗಳಿಗೆ ಊಟೋಪಚಾರಗಳನ್ನು ಒದಗಿಸಲು ಹೇಗೆ ಸಾಧ್ಯ?" ಎಂದು ಮನೋರಮೆ ಅಚ್ಚರಿ ವ್ಯಕ್ತಪಡಿಸುತ್ತಾಳೆ, ಅದಕ್ಕೆ ಮುದ್ದಣನು "ಮುನಿಗಳಿಗೆ ಸಿದ್ಧಿಸಿರುವ ಮಂತ್ರಗಳ ಬಲದಿಂದ ಇದೆಲ್ಲವೂ ಸಾಧ್ಯ" ಎನ್ನುತ್ತಾನೆ.

(ಮುಂದುವರಿಯುವುದು)

# ನಮ್ಮ ಸಮಾಜದ ಬಹುಮುಖ ಪ್ರತಿಭೆ ಎಲೆಯ ಮರೆಯಕಾಯಿ ಪ್ರಚಾರ ಬಯಸದ ಶ್ರೀ ಗುರುರಾಜ ಮಾರ್ಪಳ್ಳಿ

ಸಂದರ್ಶಿಸಿದವರು: **ಎಚ್.ರಶ್ಮೀರಾವ್ ಮಜೂರು, ಉಳಿಯಾರು**

ಶ್ರೀ ಗುರುರಾಜ ಮಾರ್ಪಳ್ಳಿಯವರು ಉತ್ತಮ ವಿದ್ವಾಂಸ,ವಾಗ್ಮಿ,ರಂಗಸಂಗೀತ ನಿರ್ದೇಶಕ,ಯಕ್ಷಗಾನ ಕಲಾವಿದ, ಕವಿ. ಪ್ರಸ್ತುತ ಕಾಪು ಮಜೂರಿನಲ್ಲಿ ನೆಲೆಸಿರುವ ಇವರು ಯಕ್ಷಗಾನದಲ್ಲಿ 20ವರ್ಷಗಳ ಮತ್ತು ರಂಗಭೂಮಿಯಲ್ಲಿ 15 ವರ್ಷಗಳ ಅನುಭವವನ್ನು ಹೊಂದಿದ್ದಾರೆ. ಯಕ್ಷಸಂಗೀತ ಕ್ಷೇತ್ರದಲ್ಲಿ ಸಂಶೋಧನೆಯನ್ನು ನಡೆಸಿದ್ದಾರೆ. ಇವರ ಹುಟ್ಟೂರು ಮಾರ್ಪಳ್ಳಿ. ಡಾ ಶಿವರಾಮ ಕಾರಂತರ ಯಕ್ಷರಂಗದಲ್ಲಿ ಕಲಾವಿದರಾಗಿದ್ದರು. ಅನೇಕ ಪತ್ರಿಕೆಗಳಿಗೆ ನಿಯತಕಾಲಿಕೆಗಳಿಗೆ ಲೇಖನವನ್ನು ಬರೆದಿದ್ದಾರೆ.

ಮಾರ್ಪಳ್ಳಿಯವರೊಡನೆ ಸಂಗೀತ ಸ್ವರೂಪದ ಬಗ್ಗೆ ನಡೆಸಿದ ಪುಟ್ಟ ಸಂದರ್ಶನ ನಿಮ್ಮ ಮುಂದಿದೆ:

**1.ಸಂಗೀತದ ಸ್ವರೂಪದ ಬಗ್ಗೆ ತಿಳಿಸುತ್ತೀರಾ?**

ನಾದ-ಸಂಗೀತದ ಮೂಲರೂಪ. ನಾದ ಭಾಷೆಯಲ್ಲಿ ವಿನ್ಯಾಸವಾಗಿ ಬಳಸಲ್ಪಡುತ್ತದೆ. ಆದರೆ ಭಾರತೀಯ ಸಂಗೀತವನ್ನು ಬಹಳ ಕಾಲದಿಂದ ಶಾಸ್ತ್ರೀಯವಾಗಿ ವೈಜ್ಞಾನಿಕವಾಗಿ ರೂಪಿಸಿದ, ಚಿಂತಿಸಿದ ಚರಿತ್ರೆಯನ್ನು ನಾವು ಕಾಣುತ್ತೇವೆ. ಭಾಷೆಯನ್ನು ಬಳಸಿಕೊಂಡು ಒಂದು ನಿಶ್ಚಿತವಾಗಿ ಛಂದಸ್ಸಿನ ರೂಪದಲ್ಲಿ ಹಾಡುಗಳನ್ನು ಬರೆದು ಅದನ್ನು ನಾದ ವಿನ್ಯಾಸಕ್ಕೆ ಒಳಪಡಿಸುವುದನ್ನು ಸಂಗೀತ ಎನ್ನಬಹುದು.

**2. ಸಂಗೀತದ ಗುಣಗಳೇನು?**

ಶಾಸ್ತ್ರೀಯ ಮತ್ತು ಜಾನಪದ ರೂಪಗಳಲ್ಲಿ ಸಂಗೀತವನ್ನು ಕಾಣುತ್ತೇವೆ. ಶಾಸ್ತ್ರೀಯ ಸಂಗೀತವು ನಾದದ ಮಾಧುರ್ಯದ ಅತ್ಯಂತ ಸೂಕ್ಷ್ಮ ಹುಡುಕಾಟ. ಕೇವಲ 12ಸ್ವರಗಳನ್ನು ಸಾವಿರಾರು ವರ್ಷಗಳಿಂದ ಹಾಡುತ್ತಿದ್ದರೂ. ಅವುಗಳ ಮಾಧುರ್ಯದ ಹುಡುಕಾಟಕ್ಕೆ ಇನ್ನೂ ಅವಕಾಶ ಇರುವುದು ಶಾಸ್ತ್ರೀಯ ಸಂಗೀತದ ವಿಶಿಷ್ಟ ಲಕ್ಷಣ. ಸಂಗೀತದ ಲಕ್ಷಣ ಎಂದರೆ ಛಂಧೋಬದ್ಧವಾದ ಗೀತೆಗಳಿಂದ ಶಾಸ್ತ್ರೀಯವಾಗಿ ನಾದವನ್ನು ಪ್ರಕಟಿಸುವುದು. ಶಾಸ್ತ್ರೀಯ ಸಂಗೀತದಲ್ಲಿ ತಾಳ, ನಾದ, ವಿನ್ಯಾಸಗಳನ್ನು ಅತ್ಯಂತ ಸೂತ್ರಬದ್ಧವಾಗಿ ಪ್ರಯೋಗಿಸಿದರೆ, ಜನ ಸಾಮಾನ್ಯರ ನಿತ್ಯ ಜೀವನದ ಹಬ್ಬ,ಜಾತ್ರೆ,ಸಂತೆ, ಇವುಗಳಲ್ಲಿಬಳಸುವ ಹಾಡು ಮತ್ತು ನೃತ್ಯಗಳನ್ನು ಜಾನಪದ ಎಂದು ವಿಂಗಡಿಸಬಹುದು.

**3. ಸಂಗೀತದಲ್ಲಿರುವ ವಿಧಗಳಾವುವು?**

ಭಾರತೀಯ ಸಂಗೀತದಲ್ಲಿ ಶಾಸ್ತ್ರೀಯ, ಶೈಲೀಕೃತ ಎಂಬ ಭೇಧಗಳಿವೆ. ಧಾರ್ಮಿಕ ಹಿನ್ನೆಲೆ ಹೊಂದಿದ ಎರಡು ಗಾನ ಪದ್ಧತಿಗಳನ್ನು ನಾವು ಗುರುತಿಸುತ್ತೇವೆ. ಉತ್ತರಾದಿ (ಹಿಂದೂ ಸ್ತಾನಿ) ಮತ್ತು ದಕ್ಷಿಣಾದಿ (ಕರ್ನಾಟಕಿ). ದಾಸ ಪಂಥದಿಂದ ವಿಶೇಶ ಪ್ರೇರಣೆ ಪಡೆದು ಪುರಂದರ ದಾಸರಿಂದ ರೂಪುಗೊಂಡ ಪದ್ಧತಿಯನ್ನು ಕರ್ನಾಟಕಿ ಎಂದು ಕರೆಯುತ್ತಾರೆ. ಹಿಂದೂಸ್ಥಾನಿ ಸಂಗೀತಕ್ಕೆ ಅರೇಬಿಯನ್, ಪರ್ಶಿಯನ್ ಸಂಗೀತದ ಪ್ರಭಾವಗಳಿದ್ದರೆ ದಕ್ಷಿಣಾದಿ ಸಂಗೀತವು ಭಕ್ತಿ ಚಳುವಳಿಯ ಪ್ರಭಾವಕ್ಕೆ ಒಳಗಾಗಿದೆ. ಉತ್ತರಾಧಿಯನ್ನು ಬಕಾವಜ್ (ಮೃದಂಗ) ತಬ್ಲಾ, ಸಾರಂಗಿಗಳ ಹಿನ್ನೆಲೆಯೊಂದಿಗೆ ಪ್ರಸ್ತುತ ಪಡಿಸಿದರೆ, ದಕ್ಷಿಣಾಧಿಯನ್ನು ಮೃದಂಗ,ಪಿಟೀಲು,ಘಟ ಮೋಚಿಂಗ್ ಇವುಗಳನ್ನು ಬಳಸಿ ಹಾಡಲಾಗುತ್ತದೆ.

**4. ತಾಳ" ಎಂದರೇನು?**

ನಾದ ಮತ್ತು ಕಾಲ ಇವುಗಳ ಸಂಬಂಧವನ್ನು ವೈವಿಧ್ಯಮಯವಾಗಿ ಬಳಸಿಕೊಳ್ಳುವುದೇ ತಾಳ. ನಾದವೂ ಅನಂತ, ಕಾಲವೂ ಅನಂತ. ಆದರೂ ಎರಡೂ ವಿಷಯಗಳೂ ಲಯಬದ್ಧ. ಸೃಷ್ಟಿಯ ಎಲ್ಲಾ ಕ್ರಿಯೆಗಳೂ ನಾದ ಮತ್ತು ಕಾಲದಲ್ಲಿ ಪುನರಾವರ್ತನೆಗೊಳ್ಳುತ್ತವೆ. ನಿಮಿಷಕ್ಕೆ 60 ಸೆಕೆಂಡು. ಗಂಟೆಗೆ 60 ನಿಮಿಷಗಳು. ದಿನಕ್ಕೆ 24ಗಂಟೆ. ತಿಂಗಳು, ವರ್ಷ ಇದನ್ನು ಪ್ರಮಾಣ ಬದ್ಧವಾಗಿ ವಿಂಗಡಿಸಲು ಕಾಲದ ನಿರಂತರತೆಯೇ ಕಾರಣ. ಇದನ್ನು ಆಧರಿಸಿ 7 ತಾಳಗಳನ್ನು ಸ್ಥೂಲವಾಗಿ ನಿರ್ಮಿಸಿದ್ದಾರೆ. 1-ರಿಂದ 4-ರ ಆವರ್ತನ ಏಕತಾಳ, 1-5ರ ಆವರ್ತನ ಜಂಪೆ ತಾಳ, 1-6-ರ ಆವರ್ತನ ರೂಪಕತಾಳ, 1-7-ರ ಆವರ್ತನ ತ್ರಿಪುಟತಾಳ ಮತ್ತು ಅಷ್ಟತಾಳ, 1-8-ರ ಆವರ್ತನ ಆದಿತಾಳ.

**5. ರಾಗ ಎಂದರೇನು?**

ಭಾರತೀಯ ಸಂಗೀತದ ವಿಶೇಷ ಕೊಡುಗೆ ರಾಗ,ಥಾಟ,ಮಟ್ಟು,ಅಲಾಪ,ಸ್ವರಗಳ ವರಸೆ ಇವುಗಳನ್ನು ರಾಗ ಎನ್ನಲು ಸಾಧ್ಯವಿಲ್ಲ. ಸರಿಗಮಪದನಿಸ ಸ್ವರಗಳನ್ನು ಹನ್ನೆರಡಾಗಿ ವಿಭಜಿಸಿ ಅವುಗಳಲ್ಲಿ ಕೆಲವೇ ಸ್ವರಗಳನ್ನು ಅವರೋಹಣ, ಉತ್ತರಾಗ, ಪೂರ್ವಾಂಗ, ವಾದಿಸ್ವರ, ಸಂವಾದಿ ಸ್ವರ, ಜೀವಸ್ವರ ಇವುಗಳನ್ನು ಲಕ್ಷಣದ ಮೂಲಕ ಪ್ರಸ್ತುತ ಪಡಿಸುವುದನ್ನು ರಾಗ ಎನ್ನುತ್ತಾರೆ.

**6. ಶಾಸ್ತ್ರೀಯ ಸಂಗೀತಕ್ಕೂ ಇತರ ಸಂಗೀತಗಳಿಗೂ ಇರುವ ವ್ಯತ್ಯಾಸವೇನು?**

ಪಾಶ್ಚಾತ್ಯ ಸಂಗೀತವು ಭಾರತೀಯ ಸಂಗೀತದಂತೆ ಲಕ್ಷಣಗಳನ್ನು ಹೊಂದಿದೆ. ಪಾಶ್ಚಾತ್ಯವಾದನದಲ್ಲಿಯೂ ಮಾಧುರ್ಯ ಸೃಷ್ಟಿಗೆ ಹೆಚ್ಚು ಒತ್ತನ್ನು ನೀಡಲಾಗಿದೆ. ಪಾಶ್ಚಾತ್ಯ ಸಂಗೀತವು ಎಲ್ಲರೂ ಭಾವಿಸುವಂತೆ ಅಬ್ಬರವಲ್ಲ, ಸೂಕ್ಷ್ಮ ಭಾವಾಭಿವ್ಯಕ್ತಿಯನ್ನು ಹೊಂದಿದೆ. ಸಿನಿಮಾ ಸಂಗೀತವು ಜನಪ್ರಿಯತೆಯನ್ನೇ ಗುರಿಯಾಗಿ ಇಟ್ಟುಕೊಂಡಿದೆ. ಕಲೆಯ ಜೊತೆಗೆ ಸಿನೆಮಾ ಉದ್ಯಮವಾಗಿರುವುದರಿಂದ ಅಲ್ಲಿ ಬಂಡವಾಳ ತೊಡಗಿಸಿದ ಸಂಸ್ಥೆಯ ವ್ಯಕ್ತಿ ಸಂಗೀತದ ಮೂಲಕ ಹಣಗಳಿಸುವುದನ್ನು ಧ್ಯೇಯವಾಗಿ ಇಟ್ಟುಕೊಂಡಿರುತ್ತಾನೆ. ಸಿನಿಮಾ ಸಂಗೀತದ ದಟ್ಟ ಪ್ರಭಾವದಿಂದಾಗಿ ಹೆಚ್ಚಿನ ಸಂಗೀತಪ್ರಿಯರಿಗೆ ಭಾರತೀಯ ಶಾಸ್ತ್ರೀಯಸಂಗೀತ ಪದ್ಧತಿಗಳ ಪರಿಚಯ ಇಲ್ಲದೆ ಹೋಗಬಹುದು.

**7. ನೀವು ರಂಗ ಸಂಗೀತ ನಿರ್ದೇಶಕರೂ ಹೌದು ಆದ್ದರಿಂದ ಅದರ ಬಗ್ಗೆ ತಿಳಿಸಿ.**

ರಂಗ ಸಂಗೀತವು ರಂಗಭೂಮಿಯ ಪ್ರಯೋಗಶೀಲತೆಯನ್ನು ಅವಲಂಬಿಸಿದೆ. ಇಲ್ಲಿ ನಾಟಕೀಯತೆಯೇ ಅದರ ಮೂಲ ಉದ್ದೇಶ. ರಂಗ ಸಂಗೀತವನ್ನು ಬೌದ್ಧಿಕ ರಂಜನೆ ಎಂದು ಭಾವಿಸಿದರೆ ಸಿನಿಮಾ ಸಂಗೀತವನ್ನು ಮನರಂಜನೆ ಎಂದು ತಿಳಿಯ ಬಹುದು. ರಂಗ ಸಂಗೀತದ ನಾಟಕೀಯತೆಯು ಶಬ್ದಗಳಿಗೆ ಚಿತ್ರರೂಪವನ್ನು ಸಂಯೋಜಿಸುವ ವಿಧಾನ.

**8. ಸಂಗೀತಕ್ಕೂ ಆಧ್ಯಾತ್ಮಕ್ಕೂ ಇರುವ ಸಂಬಂಧ ತಿಳಿಸಿ.**

ಭಾರತೀಯ ಸಂಗೀತ ಕಲೆಗಳ ಮೂಲ ಉದ್ದೇಶವೇ ದೈವಿ ಉಪಾಸನೆ, ಜಗತ್ತಿನ ಸೃಷ್ಟಿಗೂ ನಾದದ ವಿಜ್ಞಾನಕ್ಕೂ ಭಾರತೀಯ ಸಂಗೀತ ಚಿಂತಕರು ಸಂಬಂಧವನ್ನು ಬಹಳ ಕಾಲದಿಂದ ಶೋಧಿಸಿದ್ದಾರೆ. ಸಂಗೀತವು ಭಾಷೆಯನ್ನು ಮೀರಿದ ಪ್ರಭಾವವನ್ನು ಉಂಟು ಮಾಡುವುದರಿಂದ ಅದನ್ನು ಆಧ್ಯಾತ್ಮಿಕ ಸ್ತರಕ್ಕೆ ಕೊಂಡೊಯ್ಯಲಾಗಿದೆ. ಪಾಶ್ಚಾತ್ಯ ಸಂಗೀತವು ಮನುಷ್ಯನ ಭೋಗ ವಿಲಾಸ , ಭೌತಿಕ ಬೆಳವಣಿಗೆ, ಲೌಖಿಕ ಜೀವನದ ಸಂತೋಷಗಳಲ್ಲೇ ಬಹುಪಾಲು ಮುಳುಗಿದ್ದರೆ, ಭಾರತೀಯ ಸಂಗೀತ ನೃತ್ಯ, ಕಲೆ ಎಲ್ಲವೂ ತ್ಯಾಗ, ವಿರಾಗ, ದೈವಿ ಪ್ರೇಮಗಳ ಕಡೆಗೆ ಮನುಷ್ಯನನ್ನು ಒಯ್ಯುತ್ತದೆ ಎನ್ನುವುದನ್ನು ನಮ್ಮ ನಾಟ್ಯಗಳ ಮೂಲಕ, ಸಂಗೀತದ ಮೂಲಕ ಇಲ್ಲಿಯ ಕಲಾವಿದರು ಸಾಧಿಸಿ ತೋರಿಸಿದ್ದಾರೆ.

**9. ಸಂಗೀತವು ಮನಸ್ಸಿನ ಮೇಲೆ ಉಂಟುಮಾಡುವ ಪರಿಣಾಮಗಳೇನು?**

ಸಂಗೀತ ಒಂದು ಭಿನ್ನ ಮಾಧ್ಯಮ. ಚಿತ್ರ, ಶಿಲ್ಪ,ಸಾಹಿತ್ಯ,ಸಿನೆಮಾ ಇವುಗಳನ್ನು ಮತ್ತೆ ಮತ್ತೆ ನೋಡಲು ಪರಿಶೀಲಿಸಲು ಸಾಧ್ಯ. ಆದರೆ ಸಂಗೀತ ಮನುಷ್ಯನ ಜೀವಂತ ಅಭಿವ್ಯಕ್ತಿ. ಅದು ತಕ್ಷಣ ಹುಟ್ಟಿ ಭಾವನೆಗಳನ್ನು ಅರಳಿಸುವ ಕಲೆ. ಸಂಗೀತ ಕಲಾವಿದ ತನ್ನ ಸಂಗೀತದಿಂದ ತಾನು ಸಂತೋಷ ಪಟ್ಟರೆ, ಸಂಗೀತದ ಕೇಳುಗ ಅದನ್ನು ಕೇಳಿ ಸಂತೋಷ ಪಡುತ್ತಾನೆ. ಒಂದು ಕೆಟ್ಟ ಶಬ್ದಕ್ಕೂ ಒಂದು ಒಳ್ಳೆಯ ಶಬ್ದಕ್ಕೂ ಇರುವ ವ್ಯತ್ಯಾಸವೇ ಕೆಟ್ಟ ಸಂಗೀತಕ್ಕೂ ಒಳ್ಳೆಯ ಸಂಗೀತಕ್ಕೂ ಇದೆ. ಸಂಗೀತವು ಮನಸ್ಸಿಗೆ ಸಾಂತ್ವನ ನೀಡಿ ಎಲ್ಲಾ ಬೇಸರವನ್ನು ದೂರ ಮಾಡಿ ಚೈತನ್ಯವನ್ನು ಕೊಡುತ್ತದೆ. ಸಂಗೀತಕ್ಕೆ ಮನ ಸೋಲದ ವ್ಯಕ್ತಿಗಳು ಕಡಿಮೆ. ಅದಕ್ಕಾಗಿಯೇ ಶಿಶುವಿನಿಂದ, ಪಶು,ಗಿಡ,ಮರ,ಪಕ್ಷಿ,ಪ್ರಾಣಿ ಎಲ್ಲರಿಗೂ ನಾದ ಸಂತೋಷವನ್ನು ಉಂಟುಮಾಡುವುದು.

**10.ನೀವು ಸಾಹಿತ್ಯಿಕ ಕ್ಷೇತ್ರಕ್ಕೆ ನೀಡಿರುವ ಕೊಡುಗೆಗಳನ್ನು ತಿಳಿಸಿ.**

ಅತಂತ್ರ-ಕಾದಂಬರಿ, ಬಂಡೆ ಮತ್ತು ಮನುಷ್ಯ-ಕಥಾಸಂಕಲನ, ಕಾಲಪಾತ್ರ-ಕವನ ಸಂಕಲನ, ಏಕಾಂತದ ಆಲಾಪಗಳು-ನಾಟಕಗಳು,ಬಿಡುಗಡೆ, ಕಾಲ, ಕೋವಿ ಕೊಳಲು, ಸಂಗೀತ ನಿರ್ದೇಶನದ ನಾಟಕಗಳು-ತುಘಲಕ್, ಯಯಾತಿ, ಸಿರಿಸಂಪಿಗೆ, ಅಗ್ನಿ ಮತ್ತು ಮಳೆ, ಪಂಜರ ಶಾಲೆ ಇತ್ಯಾದಿ.

**11. ನಿಮಗೆ ಸಂದ ಪ್ರಶಸ್ತಿಗಳ ಬಗ್ಗೆ ಹೇಳಿ**

ನನಗೆ 1997ರಲ್ಲಿ ಮುದ್ದಣ ಕಾವ್ಯ ಪ್ರಶಸ್ತಿಯೂ 2001ರಲ್ಲಿ ಕೇಂದ್ರ ಸರಕಾರದ ಸೀನಿಯರ್ ಫೆಲೋಶಿಪ್ ಪ್ರಶಸ್ತಿಗಳು ದೊರೆಕಿವೆ.

## ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ-2012

ಶ್ರೀ ಶಾರದಾ ನಗರ, ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ-576102

**ಜಮೆ ಮತ್ತು ಖರ್ಚಿನ ವಿವರ ಮಾರ್ಚ್ 2012ರಿಂದ ಜೂನ್ 2012**

| ಜಮೆ | ಮೊತ್ತ ರೂ. | ಪೈ. | ಖರ್ಚು | ಮೊತ್ತ ರೂ. | ಪೈ. |
|---|---|---|---|---|---|
| ರಿಗೆ ಆರಂಭಿಕ ಶುಲ್ಕ | -- | -- | ರಿಂದ ಬ್ಯಾಂಕ ಶುಲ್ಕ | 390 | 00 |
| " ದೇಣಿಗೆಗಳ ಸಂಗ್ರಹ | 9,93,127 | 00 | " ಪ್ರಚಾರ | 88,135 | 00 |
| | | | " ಸ್ಮರಣಿಕೆ,ಉಡುಗೊರೆ | 88,223 | 00 |
| | | | " ಸಾರಿಗೆ ಮತ್ತು ಬಟವಾಡೆ | 5,600 | 00 |
| | | | " ಮುದ್ರಣ ಮತ್ತು ಲೇಖನ | | |
| | | | " ಸಾಮಗ್ರಿ | 4,195 | 00 |
| | | | " ಅಂಚೆ ವೆಚ್ಚ | 13,733 | 00 |
| | | | " ಶಾಮಿಯಾನ,ಅಲಂಕಾರ | | |
| | | | " ಧ್ವನಿವರ್ಧಕ ಖರ್ಚು | 1,72,263 | 00 |
| | | | " ಸ್ವಚ್ಛತಾ ವೆಚ್ಚ | 29,150 | 00 |
| | | | " ಪೂಜಾ ಖರ್ಚು | 12,978 | 50 |
| | | | " ಸಭಾ ಖರ್ಚು | 8,618 | 00 |
| | | | " ಛಾಯಾಚಿತ್ರ, ಚಿತ್ರೀಕರಣ | 58,000 | 00 |
| | | | " ಊಟ,ಉಪಹಾರ ವೆಚ್ಚ | 1,53,571 | 50 |
| | | | " ಸುರಕ್ಷಾ ವೆಚ್ಚ | 3,200 | 00 |
| | | | " ಅಂತಿಮ ಶುಲ್ಕ | | |
| | | | ಬ್ಯಾಂಕ್ ಉಳಿತಾಯ ಖಾತೆ | 3,33,673 | 50 |
| | | | ಕೈಯಲ್ಲಿರುವ ನಗದು | 21,396 | 50 |
| ಒಟ್ಟು ಮೊತ್ತ | 9,93,127 | 00 | ಒಟ್ಟು ಮೊತ್ತ | 9,93,127 | 00 |

ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ — ಹೆಬ್ಬಾರ್ ಮತ್ತು ಅಸೋಸಿಯೇಟ್ಸ್ ಲೆಕ್ಕ ಪರಿಶೋಧಕರು

ಸ್ಥಳ:ಉಡುಪಿ — ಸಹಿ/- — ಸಹಿ/- — ಸಹಿ/- — ಸಹಿ/-

ದಿನಾಂಕ: 14-6-2012 — ಅಧ್ಯಕ್ಷರು — ಪ್ರಧಾನಕಾರ್ಯದರ್ಶಿ — ಕೋಶಾಧಿಕಾರಿ — ಗಣೇಶ್ ಹೆಬ್ಬಾರ್ ಕೆ., ಮಾಲಕರು.

# ಶ್ರೀಕ್ಷೇತ್ರ ಪಾವಂಜೆಯಲ್ಲಿ ವಿಜೃಂಭಿಸಿದ ತುಳುನಾಡ ಕೃಷಿ ಜನಪದೋತ್ಸವ

ಇತ್ತೀಚೆಗೆ ಸಂಪನ್ನಗೊಂಡ ತುಳುನಾಡ ಕೃಷಿ ಜನಪದೋತ್ಸವದಲ್ಲಿ ಮೊದಲನೆಯ ದಿನ ನಡೆದ ಪಂದ್ಯಾಟದಲ್ಲಿ ಸುಮಾರು 25ಕ್ಕೂ ಮಿಕ್ಕಿ ಶಾಲಾ ಕಾಲೇಜುಗಳ 450ಕ್ಕೂ ಮಿಕ್ಕಿ ವಿದ್ಯಾರ್ಥಿಗಳು ಈ ಪಂದ್ಯಾಟದಲ್ಲಿ ಭಾಗವಹಿಸಿದ್ದು ಸಂಜೆ 6-30ರ ವರೆಗೂ ಪಂದ್ಯಾಟಗಳು ನಡೆದವು. ಮಕ್ಕಳಂತೂ ತಮ್ಮ ಸ್ಪರ್ಧೆಗಳು ಮುಗಿದರೂ ಕೂಡಾ ಗದ್ದೆಯ ಇನ್ನೊಂದು ಬದಿಯಲ್ಲಿ ಕೆಸರು ಎರಚಾಟದೊಂದಿಗೆ ಕತ್ತಲಾಗುವ ವರೆಗೂ ಸಂತೋಷಪಟ್ಟರು. ನಮ್ಮವರೇ ಆದ ಅನುಶ್ರೀ, ಪ್ರಣವ ಸ್ವರೂಪ, ಹಾಗೂ ಸಂಜನಾ ಇವರು ಪ್ರಬಂಧ ಸ್ಪರ್ಧೆಯ ಬಹುಮಾನ ಪಡೆದರು.

ಎರಡನೇ ದಿನ ನಡೆದ ಸಾರ್ವಜನಿಕ ವಿಭಾಗದ ಸ್ಪರ್ಧೆಯಲ್ಲೂ ಕೂಡಾ ಜನರಿಂದ ಒಳ್ಳೆಯ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಪುರುಷರ ವೈಯಕ್ತಿಕ ಓಟದಲ್ಲಿ 60ಕ್ಕೂ ಮಿಕ್ಕಿ ಸ್ಪರ್ಧಾಳುಗಳಿದ್ದರೆ, ಹಗ್ಗ ಜಗ್ಗಾಟಕ್ಕೆ 22 ತಂಡಗಳು ಭಾಗವಹಿಸಿದ್ದರು. ಹಗ್ಗ ಜಗ್ಗಾಟದ ಸೆಮಿಫೈನಲ್‌ನ ಒಂದೇ ಪಂದ್ಯ 28 ನಿಮಿಷಗಳ ಕಾಲ ನಡೆದು ದಾಖಲೆ ಅನಿಸಿತು. ಮಹಿಳೆಯರ ಹಿರಿಯ ನಾಗರಿಕರ ವಿಭಾಗದಲ್ಲಿ ನಮ್ಮವರಾದ ಶ್ರೀಮತಿ ರತ್ನಾ ಎಸ್.ರಾವ್ ಹೆಜಮಾಡಿಯವರು ಪ್ರಥಮ ಬಹುಮಾನ ಪಡೆದರೆ, ಸಾವಿತ್ರಿ ದಿವಾಕರ್, ವಿದ್ಯಾಶಂಕರಿ, ಜ್ಯೋತಿ ಶ್ರೀನಾಥ್ ಹಾಗೂ ಕಿರಣಸ್ಕಂದ ಸ್ವಾಮಿಯವರು ಒಳಗೊಂಡ ತಂಡ ಮಹಿಳೆಯರ ಚೆಂಡಾಟದಲ್ಲಿ ಪ್ರಥಮ ಬಹುಮಾನ ಪಡೆದರು. ಎರಡನೆಯ ದಿನವೂ ಸುಮಾರು 7-30ರ ವರೆಗೆ ಸ್ಪರ್ಧೆಗಳು ನಡೆದು ಬಹುಮಾನ ವಿತರಣೆ ಕಾರ್ಯಕ್ರಮ ಮುಕ್ತಾಯವಾದಾಗ 8-00 ಗಂಟೆಯಾಗಿತ್ತು.

ಎರಡೂ ದಿನವೂ ತುಳುನಾಡಿನ ವೈಶಿಷ್ಟ್ಯಪೂರ್ಣವಾದ, ಸ್ವಾದಿಷ್ಟವಾದ ಉಪಹಾರ ಹಾಗೂ ಊಟದ ವ್ಯವಸ್ಥೆಯಿದ್ದು, ಪ್ರತಿದಿನ ಒಂದು ಸಾವಿರಕ್ಕೂ ಹೆಚ್ಚು ಜನ ಪಾಲ್ಗೊಂಡಿದ್ದರು.

ಕಳೆದ ಮೂರು ವರ್ಷಗಳಿಂದ ಅಪೂರ್ವ ಯಶಸ್ಸಿನಿಂದ ಮುಂದುವರಿಯುತ್ತಿರುವ ಈ ಕಾರ್ಯಕ್ರಮವನ್ನು ಮಂಗಳೂರಿನ ಜನಪ್ರಿಯ ಲೋಕಸಭಾ ಸದಸ್ಯ, ಶ್ರೀ ನಳಿನ್‌ಕುಮಾರ್ ಕಟೀಲುರವರ ಗೌರವಾಧ್ಯಕ್ಷತೆಯ ಸಮಿತಿಯು ಆಯೋಜಿಸಿತ್ತು.

**-ಸ್ಕಂದಸ್ವಾಮಿ, ಮುಕ್ಕ**

# ಸ್ಥಾನಿಕ ಬ್ರಾಹ್ಮಣರ ಆಡಳಿತದಲ್ಲಿರುವ ದೇವಸ್ಥಾನಗಳ ವೇದಿಕೆಯ ಸಭೆ

ಇದೇ ವರ್ಷದ ಮೇ ತಿಂಗಳಲ್ಲಿ ಉಡುಪಿಯಲ್ಲಿ ನಡೆದ ಸಮಾವೇಶದಲ್ಲಿ ನಮ್ಮವರ ಆಡಳಿತದಲ್ಲಿರುವ ದೇವಸ್ಥಾನಗಳ ಸಮಸ್ಯೆಗಳ ಪರಿಹಾರ ಹಾಗೂ ಅವುಗಳ ಅಭಿವೃದ್ಧಿಯ ನಾಯಕತ್ವ ವಹಿಸಲಿಕ್ಕಾಗಿ ವೇದಿಕೆಯೊಂದನ್ನು ರಚಿಸಲಾಗಿತ್ತು. ಆ ಪ್ರಕಾರ ನಮ್ಮವರ ಆಡಳಿತದಲ್ಲಿರುವ ದೇವಸ್ಥಾನಗಳ ಮೊಕ್ತೇಸರರು ಹಾಗೂ ಅರ್ಚಕರು ತಾ 29-07-2012 ರಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸದನದಲ್ಲಿ ಸಭೆ ಸೇರಿದರು. ಈ ಸಭೆಯಲ್ಲಿ ಪುತ್ತೂರಿನ ಶ್ರೀ ಎನ್. ಕೆ. ಜಗನ್ನಿವಾಸರನ್ನು ಈ ವೇದಿಕೆಯ ಅಧ್ಯಕ್ಷರನ್ನಾಗಿಯೂ ಶ್ರೀ ಕರುಣ್ ಬೆಳ್ಳೆ ಇವರನ್ನು ಕಾರ್ಯದರ್ಶಿಯನ್ನಾಗಿಯೂ ಹಾಗೂ ಶ್ರೀ ಬಿಳಿನೆಲೆ ಗೋಪಾಲರಾಯರನ್ನು ಸಂಚಾಲಕರನ್ನಾಗಿಯೂ ಆರಿಸಲಾಯಿತು. ಈ ಸಭೆಯಲ್ಲಿ ವೇದಿಕೆಯ ಉದ್ದೇಶಗಳು ಹಾಗೂ ಬೈಲಾವನ್ನು ನಿರ್ಧರಿಸಲಾಯಿತು. ವೇದಿಕೆಗೆ ತಿಳಿದಿರುವ ದೇವಸ್ಥಾನಗಳ ಪಟ್ಟಿಯನ್ನು ಕಳೆದ ತಿಂಗಳ ಶ್ರೀ ಶಾರದಾ ಪತ್ರಿಕೆಯಲ್ಲಿ ಪ್ರಕಟಿಸಲಾಗಿದ್ದು ಈ ಪಟ್ಟಿಯಲ್ಲಿಲ್ಲದ ಇನ್ನು ಯಾವುದಾದರೂ ನಮ್ಮವರ ದೇವಸ್ಥಾನಗಳಿದ್ದರೆ ಶ್ರೀ ಎನ್.ಕೆ. ಜಗನ್ನಿವಾಸರಾಯರನ್ನು (ದೂರವಾಣಿ 9448260888) ಸಂಪರ್ಕಿಸಿ ವೇದಿಕೆಯ ಸದಸ್ಯರಾಗುವಂತೆ ಕೋರಲಾಗಿದೆ

**ವರದಿ : ಡಾ| ವೈ.ಸುದರ್ಶನ ರಾವ್**

## ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನ, ಪಾವಂಜೆ

ಶ್ರೀ ಕ್ಷೇತ್ರ ಪಾವಂಜೆಯ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ತಾ 29-08-2012ರ ಬುಧವಾರ **ಋಗುಪಾಕರ್ಮವು** ಜರಗಲಿದ್ದು ಪ್ರಾತಃಕಾಲ 600 ಗಂಟೆಗೆ ಹಾಗೂ 10 ಗಂಟೆಯ ನಂತರವೂ ಭಾಗವಹಿಸುವವರಿಗೆ ಅವಕಾಶವಿದೆ.

**-ಆಡಳಿತ ಮಂಡಳಿ**

## ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನ, ಪಾವಂಜೆ

ಶ್ರೀ ಕ್ಷೇತ್ರ ಪಾವಂಜೆಯ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ತಾ 16-08-2012ರಿಂದ ತಾ 15-09-2012ರ ತನಕ (ಸಿಂಹ ಮಾಸ) ಸಿಂಹ ದೀಪೋತ್ಸವವು ಜರಗಲಿದ್ದು ವಿಶೇಷವಾದ ಈ ಸೇವೆ (ಸೋಣಾರತಿ)ಯಲ್ಲಿ ಭಾಗಿಗಳಾಗಿ ಕೃತಾರ್ಥರಾಗುವಂತೆ ವಿನಂತಿ. ಈಗಾಗಲೇ ಸಾಕಷ್ಟು ದಿನದ ಸೇವೆಗಳು ಕಾದಿರಿಸಲ್ಪಟ್ಟಿದ್ದು ಉಳಿದ ದಿನಗಳಲ್ಲಿ ಆಸಕ್ತ ಭಕ್ತಾಭಿಮಾನಿಗಳಿಗೆ ಸೇವೆಯ ಅವಕಾಶವಿದೆ.

**ಸಂಪರ್ಕ:-0824-2283393, 8453669542** **-ಆಡಳಿತ ಮಂಡಳಿ**

### ಶ್ರೀ ಶಿವಬ್ರಾಹ್ಮಣ ಸ್ಥಾನಿಕ ಸಭಾ, ಬಪ್ಪನಾಡು

# ಶ್ರೀ ರತ್ನಾಕರ ಬಿ.ರಾವ್ ಇವರಿಗೆ ಶ್ರದ್ಧಾಂಜಲಿ ಅರ್ಪಣೆ

ಶ್ರೀ ಶಿವಬ್ರಾಹ್ಮಣ ಸ್ಥಾನಿಕ ಸಭಾ, ಬಪ್ಪನಾಡು-ಇದರ ನಿಕಟ ಪೂರ್ವ ಅಧ್ಯಕ್ಷರಾಗಿದ್ದು, ಈ ಸಂಘಟನೆಯ ಅಭಿವೃದ್ಧಿಗಾಗಿ ಸಕ್ರಿಯವಾಗಿ ಶ್ರಮಿಸಿದ ಶ್ರೀಯುತ. ರತ್ನಾಕರ ಬಿ.ರಾವ್ ರವರು ಇತ್ತಿಚೆಗೆ (ದಿ:8-4-2012) ದೈವಾಧೀನರಾದ ಪ್ರಯುಕ್ತ, ದಿನಾಂಕ:29-4-2012ರ ಭಾನುವಾರದಂದು ಅಪರಾಹ್ನ ಡಾ ಬಿ.ಹೆಚ್.ರಾಘವರಾವ್ ಇವರ ಮನೆಯಲ್ಲಿ ಮೃತರ ಗೌರವಾರ್ಥ ಶ್ರದ್ಧಾಂಜಲಿ ಸಭೆಯನ್ನು ಆಯೋಜಿಸಲಾಗಿತ್ತು. ಶಿವಬ್ರಾಹ್ಮಣ ಸಂಘದ ಸದಸ್ಯರು ಹಾಗೂ ಹಿತೈಷಿಗಳು ಈ ಸಂದರ್ಭದಲ್ಲಿ ಹಾಜರಿದ್ದು, ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರಿ ಮೌನ ಪ್ರಾರ್ಥನೆ ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷರಾಗಿ ಸಹಕಾರ, ಮಾರ್ಗದರ್ಶನ ನೀಡುತ್ತಿದ್ದ ಶ್ರೀ ಭಗವಾನ್‌ದಾಸಶರ್ಮ ಇವರನ್ನು ಬಪ್ಪನಾಡು ಸ್ಥಾನಿಕ ಬ್ರಾಹ್ಮಣ ಸಭಾದ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆಮಾಡಿ ಅನುಮೋದಿಸಲಾಯಿತು. ಬಪ್ಪನಾಡು ಸ್ಥಾನಿಕ ಬ್ರಾಹ್ಮಣ ಸಂಘಟನೆಯ ನೂತನ ಅಧ್ಯಕ್ಷರ ಮಾರ್ಗದರ್ಶನದಲ್ಲಿ ಇನ್ನೂ ಹೆಚ್ಚಿನ ಪ್ರಗತಿ ಸಾಧಿಸಲಿ.

**ಶ್ರೀ ಶಿವಬ್ರಾಹ್ಮಣ ಸ್ಥಾನಿಕ, ಸಭಾ ಬಪ್ಪನಾಡು**

## ದಿ/ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ, ಕುಳಾಯಿ ಪ್ರತಿಭಾ ಪುರಸ್ಕಾರ


2011-12ರ ಸಾಲಿನ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ ಹಾಗೂ ದ್ವಿತಿಯ ಪಿ.ಯು.ಸಿ ಪರೀಕ್ಷೆಯಲ್ಲಿ 85%ಕ್ಕೂ ಹೆಚ್ಚು ಅಂಕಗಳಿಸಿ(ವಿಶಿಷ್ಟ ಶ್ರೇಣಿ) ತೇರ್ಗಡೆಯಾದ ಸರ್ವ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ, ಕರಂಗಲ್ಪಾಡಿ, ಮಂಗಳೂರು ಇಲ್ಲಿ ದಸರಾ ಪ್ರಯುಕ್ತ ನಡೆಯುವ ನಾಡಹಬ್ಬದಂದು ಮೇಲೆ ತಿಳಿಸಿದ ಪ್ರತಿಷ್ಠಾನದ ವತಿಯಿಂದ ಪುರಸ್ಕರಿಸಲಾಗುವುದು. ದಕ್ಷಿಣ ಕನ್ನಡ ಉಡುಪಿ ಜಿಲ್ಲೆಯ ಆಸಕ್ತ ಅರ್ಹ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರು ತಮ್ಮ ಅಂಕಪಟ್ಟಿಯ ಯಥಾ ನಕಲು.ವಿಳಾಸ, ದೂರವಾಣಿ ಸಂಖ್ಯೆ ಇತ್ಯಾದಿ ವಿವರಗಳನ್ನು ದಿನಾಂಕ 30-10-2012ರ ಒಳಗಾಗಿ ಈ ಕೆಳಗಿನ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ. ನಾಡ ಹಬ್ಬದ ದಿನಾಂಕವನ್ನು ಪತ್ರ ಮುಖೇನ ತಿಳಿಸಲಾಗುವುದು.

**-ಕೆ.ಸದಾಶಿವ ಶಾಸ್ತ್ರಿ**, 3-68(7), ಶ್ರೀ ವಿಷ್ಣು ಮೂರ್ತಿ ದೇವಸ್ಥಾನ ರಸ್ತೆ, ಕುಳಾಯಿ ಅಂಚೆ, ಮಂಗಳೂರು, 575019. ದೂ.0824-2408544

### ವಿಳಾಸ ಬದಲಾವಣೆ









ಎಮ್. ದೇವಾನಂದ್ ಭಟ್

ಶೋಭಾ ಡಿಜಿಟಲ್

ಸ್ಟುಡಿಯೋ & ವೀಡಿಯೊ




ಬೆಳ್ವಾಯಿ-574213
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್
ಎಡಪದವು - 574 164

ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು



KISHAN



MAIN ROAD, MAJOOR & BANTAKAL.

## ಮಠಂತಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ

ಅಂಚೆ:ಕೋಡಿಂಬಾಡಿ–574 287, ಪುತ್ತೂರು ತಾಲೂಕು, (ದ.ಕ)

ಆತ್ಮೀಯರೇ :

ಮಠದ ಬೆಟ್ಟು ಶ್ರೀರಾಜರಾಜೇಶ್ವರಿ ದೇವಸ್ಥಾನದಲ್ಲಿ ದಿನಾಂಕ 24–6–2012 ಆದಿತ್ಯವಾರದಂದು ನಡೆದ ಆಡಳಿತ ಮಂಡಳಿಯ ಮಹಾಸಭೆಯಲ್ಲಿ ಈ ಕೆಳಗಿನವರನ್ನು ಆಡಳಿತ ಮಂಡಳಿಗೆ ಆಯ್ಕೆ ಮಾಡಲಾಗಿದೆ.

1. ಶ್ರೀ ಟಿ. ಉಮೇಶ ರಾವ್, ತೋಟಾಲು
2. ಶ್ರೀ ಯಂ. ನಾಗೇಶ ಶರ್ಮ, ಮಠದಬೆಟ್ಟು
3. ಶ್ರೀ ಕೆ. ಯೋಗೀಶ ರಾವ್ ಕೊಕ್ರಾಡಿ
4. ಶ್ರೀ ಎಸ್.ಸದಾನಂದ ರಾವ್, ಶುಂಠಿಪಾಡಿ.
5. ಶ್ರೀ ಕೆ ಸತ್ಯನಾರಾಯಣ, ಕುಂಜಾರು.
6. ಶ್ರೀ ಟಿ ರಮಾನಂದರಾವ್ ತಾಳೆಪಾಡಿ.
7. ಶ್ರೀ ಟಿ ಅಣ್ಣಪ್ಪಯ್ಯ ಕೊಂಬೆಟ್ಟು
8. ಶ್ರೀ ಯನ್. ಯಸ್.ಸುಕುಮಾರ್, ಶ್ಯಾರ
9. ಶ್ರೀ ಯಂ ನರೇಂದ್ರ ಪುತ್ರಬೈಲು
10. ಶ್ರೀ ಎ.ಸುದರ್ಶನ–ಅನಾರು.
11. ಶ್ರೀ ಯನ್.ಯಸ್ ನಟರಾಜ್, ನಟ್ಟೋಜಿ

ಆಡಳಿತ ಮಂಡಳಿಯ ನೂತನ ಅಧ್ಯಕ್ಷರನ್ನಾಗಿ ಶ್ರೀ ಟಿ.ಅಣ್ಣಪ್ಪಯ್ಯ ಹಾಗೂ ಕಾರ್ಯದರ್ಶಿಯನ್ನಾಗಿ ಶ್ರೀ ಯಂ. ನಾಗೇಶ ಶರ್ಮ ಹಾಗೂ ಪ್ರಧಾನ ಅರ್ಚಕರನ್ನಾಗಿ ಸರ್ವಾನು ಮತದಿಂದ ಆರಿಸಲಾಗಿದೆ. ಶ್ರೀ ದೇವಳದ ಸಮಗ್ರ ಜೀರ್ಣೋದ್ಧಾರದ ಬಗ್ಗೆ ಕಮಿಟಿಯನ್ನು ಮಾಡುವುದೆಂದು ತಿರ್ಮಾನಿಸಲಾಯಿತು. **–ಕಾರ್ಯದರ್ಶಿ**

## ಶ್ರೀ ಸುಬ್ರಹ್ಮಣ್ಯ ಸಭಾ ಚ್ಯಾರಿಟೇಬಲ್ ಟ್ರಸ್ಟ್ (ರಿ.)

ಶ್ರೀ ಕುಡ್ಲು ವಿಷ್ಣು ಶ್ಯಾನುಭಾಗರು ತಮ್ಮ ಪತ್ನಿ ಶ್ರೀಮತಿ ಕುಡ್ಲು ಪ್ರೇಮಾವತಿ ಅಮ್ಮ ಸ್ಮಾರಕ ನಿಧಿಯನ್ನು ರೂ 75,000/– ವಂತಿಗೆಯೊಂದಿಗೆ ಸ್ಥಾಪಿಸಿ ವೈದ್ಯಕೀಯ ಶಿಕ್ಷಣ ಪಡೆಯುವ ನಮ್ಮ ಸಮಾಜದ ಓರ್ವ ವಿದ್ಯಾರ್ಥಿಗೆ ಪ್ರೋತ್ಸಾಹಧನವನ್ನು ಕೊಡಲು ಬಯಸಿದ್ದಾರೆ. ಅಂತೆಯೇ ಅವರು ತಮ್ಮ ಪುತ್ರ ಕುಡ್ಲು ಕೇಶವ ಶ್ಯಾನುಭಾಗರ ಸ್ಮಾರಕ ನಿಧಿಯನ್ನು ರೂ 60,000/– ವಂತಿಗೆಯೊಂದಿಗೆ ಸ್ಥಾಪಿಸಿ ಸಿ.ಎ ಕಲಿಯುವ ಸಮಾಜದ ಓರ್ವ ವಿದ್ಯಾರ್ಥಿಗೆ ಪ್ರೋತ್ಸಾಹಧನವನ್ನು ಕೊಡಲು ಬಯಸಿದ್ದಾರೆ.

2012–13ನೇ ಸಾಲಿನ ಮೇಲಿನ ಎರಡು ನಿಧಿಗಳ ಪಾರಿತೋಷಕವನ್ನು ಶ್ರೀ ಸಭೆಯು ಅಕ್ಟೋಬರ್ 2012ರಲ್ಲಿ ನಡೆಯುವ ನಾಡ–ಹಬ್ಬದ ಸಂಧರ್ಭದಲ್ಲಿ ವಿತರಿಸಲಿದೆ. ಆದುದರಿಂದ ಸಮಾಜದ ಅರ್ಹ ವಿದ್ಯಾರ್ಥಿಗಳ ಮೇಲಿನ ಪ್ರೋತ್ಸಾಹ ಧನಕ್ಕೆ ಅರ್ಜಿಯನ್ನು ಬರೆದು ದಿನಾಂಕ 30–9–2012 ಒಳಗೆ ತಲುಪುವಂತೆ ಕಾರ್ಯದರ್ಶಿ ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಇವರಿಗೆ ಕಳುಹಿಸಿ ಕೊಡಲು ಕೋರಲಾಗಿದೆ. ಅರ್ಜಿಯೋಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯನ್ನು ಲಗ್ತೀಕರಿಸಬೇಕು.

**–ಕರುಣ್‌ರಾವ್ ಬೆಳ್ಳೆ, ಕಾರ್ಯದರ್ಶಿ**

## ಶ್ರೀ ಸುಬ್ರಹ್ಮಣ್ಯ ಸಭಾ ಚ್ಯಾರಿಟೇಬಲ್ ಟ್ರಸ್ಟ್ (ರಿ.)

2012–13 ನೇ ಸಾಲಿನಲ್ಲಿ ಶ್ರೀ. ಸಭೆಯು ಸಮಾಜದ ಆರ್ಥಿಕವಾಗಿ ಹಿಂದಿರುವ ಕುಟುಂಬಗಳಿಂದ ಬರುವ ಅರ್ಹ ವಿಧ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣವನ್ನು (ಬಿ.ಇ,ಎಮ್.ಇ, ಎಮ್.ಬಿ.ಬಿ.ಎಸ್, ಬಿ.ಡಿ ಎಸ್, ಪಾಲಿಟೆಕ್ನಿಕ್, ಐ.ಟಿ.ಐ, ಎಮ್.ಎ, ಎಮ್.ಎಸ್.ಸಿ., ಎಮ್.ಕಾಂ,ಸಿ.ಎ., ಬಿ.ಎಡ್.,) ಪಡೆಯಲು ಸಾಲ ವಿಧ್ಯಾರ್ಥಿ ವೇತನವನ್ನು ವಿತರಿಸಲಿದೆ. ಈ ಸೌಲಭ್ಯವನ್ನು ಪಡೆಯಲು ಸಮಾಜದ ಅರ್ಹ ವಿಧ್ಯಾಥಿಗಳು ಬಿಳಿ ಹಾಳೆಯಲ್ಲಿ ಕಾರ್ಯದರ್ಶಿ ಶ್ರೀ. ಸುಬ್ರಹ್ಮಣ್ಯ ಸಭಾ ಮಂಗಳೂರು ಇವರಿಗೆ ಅರ್ಜಿಯುನ್ನು ಬರೆಯಲು ಕೋರಲಾಗಿದೆ. ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿ ಹಾಗೂ ಈ ವರ್ಷದ ಕಲಿಕಾ ಪ್ರಮಾಣ ಪತ್ರವನ್ನು ಲಗ್ತೀಕರಿಸಬೇಕು.

ಈ ಹಿಂದೆ ಸಾಲ ವಿಧ್ಯಾರ್ಥಿ ವೇತನವನ್ನು ಪಡೆದುಕೊಂಡ ವಿಧ್ಯಾರ್ಥಿಗಳು ಶಿಕ್ಷಣವನ್ನು ಮುಂದುವರಿಸಲು 2012–13ನೇ ಸಾಲಿನ ಕಂತನ್ನು ಪಡೆಯಲು ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ ಮಂಗಳೂರು ಇಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಈ ಸಾಲಿನಲ್ಲಿ ಈ ಕೆಳಗಿನ ವಿಧ್ಯಾರ್ಥಿವೇತನ ನಿಧಿಗಳನ್ನು ಕೃತಜ್ಞಾತಾಪೂರ್ವಕವಾಗಿ ಶ್ರೀ ಸಭೆಯು ಸ್ವೀಕರಿಸಿರುತ್ತದೆ.

| | | |
|---|---|---|
| 1) | ಡಾ. ದಯಾನಂದ ಎಸ್ ರಾವ್ ಎಜುಕೇಶನಲ್ ಟ್ರಸ್ಟ ಬೆಂಗಳೂರು | ರೂ.400001.00 |
| 2) | ಶ್ರೀಮತಿ. ಶಾಂಭವಿ ಮತ್ತು ಶ್ರೀ.ಕೃಷ್ಣರಾವ್ ಕುಂಜಾರು ಸಾ.ವಿ.ವೇ.ನಿಧಿ | ರೂ.100000.00 |
| 3). | ಶ್ರೀ.ಐ ಕೆ ರಘುರಾಮ ರಾವ್ ಸಾ.ವಿ.ವೇ.ನಿಧಿ | ರೂ.100000.00 |
| 4). | ಶ್ರೀ.ಎ. ನಾರಾಯಣರಾವ್ ಮತ್ತು ಶ್ರೀಮತಿ.ಎ ಶಾರದಮ್ಮ ಸಾ.ವಿ.ವೇ.ನಿಧಿ | ರೂ. 50000.00 |

**–ಕರುಣ್‌ರಾವ್ ಬೆಳ್ಳೆ, ಕಾರ್ಯದರ್ಶಿ**

## ಶ್ರೀ ಸುಬ್ರಹ್ಮಣ್ಯ ಸಭಾ ಚ್ಯಾರಿಟೇಬಲ್ ಟ್ರಸ್ಟ್ (ರಿ.)

2012–13ನೇ ಸಾಲಿನಲ್ಲಿ ಪಿ.ಯು.ಸಿ ಮತ್ತು ಮೇಲ್ಪಟ್ಟ ತರಗತಿಯಲ್ಲಿ ಕಲಿಯುವ ಸಮಾಜದ ಆರ್ಥಿಕವಾಗಿ ಹಿಂದಿರುವ ಕುಟುಂಬಗಳಿಂದ ಬರುವ ಅರ್ಹ ವಿದ್ಯಾರ್ಥಿಗಳಿಂದ ಸಾಮಾನ್ಯ ವಿಧ್ಯಾರ್ಥಿ ವೇತನವನ್ನು ಪಡೆಯಲು ದಿನಾಂಕ 30–10–2012ರ ಒಳಗೆ ತಲುಪುವಂತೆ ಅರ್ಜಿಯನ್ನು ಕಾರ್ಯದರ್ಶಿ, ಶ್ರೀ. ಸುಬ್ರಹ್ಮಣ್ಯ ಸಭಾ ಮಂಗಳೂರು ಇವರಿಗೆ ಕಳುಹಿಸಿ ಕೊಡಲು ಕೋರಲಾಗಿದೆ. ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿ ಹಾಗೂ ಈ ವರ್ಷದ ಕಲಿಕಾ ಪ್ರಮಾಣ ಪತ್ರವನ್ನು ಲಗ್ತಿಕರಿಸಬೇಕು.

ಅರ್ಜಿ ಫಾರ್ಮುಗಳು ದೊರೆಯುವ ವಿಳಾಸಗಳು ಈ ಕೆಳಗಿನಂತಿವೆ :

1) ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ, ಮಂಗಳೂರು ಹಾಗೂ ಪುತ್ತೂರು ಶಾಖೆ.
2) ಶ್ರೀ ಕೆ ಹರ್ಷಕುಮಾರ್, ಪ್ರಮೋದ್ ಆಟೋಮೊಬೈಲ್, ಕರಂಗಲ್ಪಾಡಿ, ಮಂಗಳೂರು.
3) ಶ್ರೀ ಬಿ.ಎಸ್. ಅನಿಲ್ ರಾವ್, ವಿಶ್ರಾಮ್ ಮೋಟಾರ್ಸ, ಕೊಡಿಯಾಲ್‌ಬೈಲ್ ಮಂಗಳೂರು.
4) ಶ್ರೀ ಉಮೇಶ್ ಶಾನ್‌ಭಾಗ್, ಮೂಕಾಂಬಿಕಾ ಟಿಂಬರ್ಸ್, ಕಿರಿಮಂಜೇಶ್ವರ ಕುಂದಾಪುರ.
5) ಶ್ರೀ ಭೋಜರಾವ್, ಸುಲಗ್ನ ಮಾಸಪತ್ರಿಕೆ, ಕುಕ್ಕಿಕಟ್ಟೆ, ಉಡುಪಿ.
6) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ.
7) ಶ್ರೀ ಜ್ಞಾನಶಕ್ತಿಸುಬ್ರಹ್ಮಣ್ಯ ದೇವಸ್ಥಾನ, ಪಾವಂಜೆ.
8) ಶ್ರೀ ಶಾಲಿಪುರ ಸುಬ್ರಹ್ಮಣ್ಯ ದೇವಸ್ಥಾನ, ಕೊಕ್ರಾಡಿ, ಬೆಳ್ತಂಗಡಿ ತಾಲೂಕು.
9) ಶ್ರೀ ಎಮ್.ಎಸ್. ಅರುಣ್ ಕುಮಾರ್, ದಿಶಾಬೇಕರಿ, ಉಜಿರೆ.
10) ಶ್ರೀ ದೇವಾನಂದ ಭಟ್, ಅಧ್ಯಕ್ಷರು, ಆಧಿಶಂಕರ ಬ್ರಾಹ್ಮಣಸಭಾ, ಮೂಡುಬಿದ್ರೆ.
11) ಶ್ರೀ ಎಮ್.ರಾಮಮೋಹನ್ ರಾವ್, ಅಧ್ಯಕ್ಷರು, ಶಂಕರ ಪ್ರತಿಷ್ಟಾನ, ಕಾರ್ಕಳ.
12) ಶ್ರೀ ಎಮ್.ಕೆ ಮೋಹನ್ ರಾವ್, ಅಧ್ಯಕ್ಷರು, ಸ್ಥಾನಿಕಬ್ರಾಹ್ಮಣ ಸಂಘ, ಪಡುಬಿದ್ರೆ.
13) ಶ್ರೀ ಎಮ್.ಎಸ್.ರಘುನಾಥ ರಾವ್, ರಾಜೇಶ ಪವರ್ ಪ್ರೆಸ್, ದರ್ಬೆ, ಪುತ್ತೂರು.
14) ಶ್ರೀ ಎನ್.ಎಸ್.ನಟರಾಜ್, ಪುತ್ತೂರು.
15) ಡಾ.ಸದಾಶಿವ ರಾವ್, ಜ್ಯೋತಿ ಆಸ್ಪತ್ರೆ, ಸುಳ್ಯ.
16) ಶ್ರೀ.ಬಿ ಭಾಸ್ಕರ್ ರಾವ್, ಬಾಯಂಬು, ಸುಳ್ಯ.

**–ಕರುಣ್‌ರಾವ್ ಬೆಳ್ಳೆ, ಕಾರ್ಯದರ್ಶಿ**

## ಶ್ರೀ ಶಾರದಾ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ (ನಿ.)

**ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್ , ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408**

### 2011–12ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸು

**ಮಾನ್ಯ ಸದಸ್ಯರೇ, ತಾ.16-07-2012**

**ನಮ್ಮ ಸೊಸೈಟಿಯ 2011-12ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ.23-09-2012ನೇ ರವಿವಾರ ಬೆಳಿಗ್ಗೆ 10-30 ಗಂಟೆಗೆ ನಮ್ಮ ಕಛೇರಿಯಿರುವ ಭೂವರಾಹ ಸಂಕೀರ್ಣದಲ್ಲಿ ನಡೆಯಲಿದೆ. ಸದಸ್ಯರೆಲ್ಲರೂ ಈ ಸಭೆಯಲ್ಲಿ ತಪ್ಪದೇ ಹಾಜರಿರಬೇಕಾಗಿ ವಿನಂತಿ.**

**ಆಡಳಿತ ಮಂಡಳಿಯ ನಿರ್ಣಯದಂತೆ**

| | |
|---|---|
| **ಪಟ್ಟಾಭಿರಾಮ ಎನ್.ಎಸ್.** | **ಎಂ. ಸದಾನಂದ ರಾವ್** |
| ಕಾರ್ಯದರ್ಶಿ | ಅಧ್ಯಕ್ಷರು |

**ವಿಷಯ ಸೂಚಿ**

1. **ಮಹಾಸಭೆಯ ನೋಟೀಸನ್ನು ಓದಿ ಅಂಗೀಕರಿಸುವುದು**
2. **ತಾ.18-09-2011ರಂದು ಜರಗಿದ ಮಹಾಸಭೆಯ ವರದಿಯ ಅಂಗೀಕಾರ**
3. **2011-2012ನೇ ಸಾಲಿನ ವಾರ್ಷಿಕ ವರದಿಯ ಅಂಗೀಕಾರ.**
4. **2011-2012ನೇ ವರ್ಷದ ಅಪರಿಶೋಧಿತ ಲಾಭ-ನಷ್ಟ ತಃಖ್ತೆ ಮತ್ತು ಆಸ್ತಿ-ಜವಾಬ್ದಾರಿಗಳ ತಃಖ್ತೆಯ ಪರಿಶೀಲನೆ ಮತ್ತು ಅಂಗೀಕಾರ.**
5. **2011-2012ನೇ ಸಾಲಿನ ಅಂದಾಜು ಆಯವ್ಯಯ ತಃಖ್ತೆಗಿಂತ ಹೆಚ್ಚಾದ ವೆಚ್ಚಗಳ ಪರಿಶೀಲನೆ ಮತ್ತು ಮಂಜೂರಾತಿ.**
6. **2012-2013ನೇ ಸಾಲಿನ ಅಂದಾಜು ಆಯವ್ಯಯ ಪಟ್ಟಿಯ ಅಂಗೀಕಾರ**
7. **ಅಧ್ಯಕ್ಷರ ಅನುಮತಿ ಮೇರೆಗೆ ಮಹಾಸಭೆಯ ವ್ಯಾಪ್ತಿಗೆ ಒಳಪಟ್ಟು ಬರಬಹುದಾದ ಇತರ ವಿಷಯಗಳು. ಚರ್ಚೆಯ ವಿಷಯಗಳಿದ್ದರೆ ಸದಸ್ಯರು ಮಹಾಸಭೆಯ ದಿನಾಂಕದ ಐದು ದಿನಗಳ ಮೊದಲು ತಲುಪುವಂತೆ ಬರಹ ಮೂಲಕ ಸೊಸೈಟಿಯ ಅಧ್ಯಕ್ಷರಿಗೆ ಅಥವಾ ಕಾರ್ಯದರ್ಶಿಯವರಿಗೆ ಸೊಸೈಟಿಯ ಕಛೇರಿಯಲ್ಲಿ ಸಲ್ಲಿಸತಕ್ಕದ್ದು.**

**ಲಾಭಾಂಶ : 2005-2006ರಿಂದ 2010-2011ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದೇ ಇರುವ ಸದಸ್ಯರು ಸೊಸೈಟಿಯ ವ್ಯವಹಾರದ ವೇಳೆಯಲ್ಲಿ ಬಂದು ಪಡೆದುಕೊಳ್ಳಬಹುದು. 2005-06ನೇ ಸಾಲಿನ ಲಾಭಾಂಶ ಪಡೆದುಕೊಳ್ಳದೇ ಇದ್ದವರು ಅದನ್ನು ಪಡೆದುಕೊಳ್ಳಲು ಕೊನೆಯ ದಿನಾಂಕ 31-10-2012.**

## ಗೃಹಪ್ರವೇಶ

ಉಡುಪಿ ಕಿನ್ನಿಮೂಲ್ಕಿಯ ಶ್ರೀ ಸುಧಾಕರ್ ಮತ್ತು ಶ್ರೀಮತಿ ಜ್ಯೋತಿ ದಂಪತಿಗಳು ತಾ.11-07-2012ರಂದು ಕುಂಜಿಬೆಟ್ಟಿನ ಶಾರದಾ ಮಂಟಪದ ಬಳಿ ಇರುವ ''ಹರ್ಷವರ್ಧನ'' ಎಪಾರ್ಟ್‌ಮೆಂಟ್ 'ಬಿ ಬ್ಲಾಕ್'ನಲ್ಲಿರುವ ತಮ್ಮ ಹೊಸ ಫ್ಲ್ಯಾಟಿನ ಪ್ರವೇಶೋತ್ಸವವನ್ನು ಗಣಹೋಮ ಮತ್ತು ಸತ್ಯನಾರಾಯಣ ಪೂಜೆಯೊಂದಿಗೆ ಬಂಧುಮಿತ್ರ ರೊಡಗೂಡಿ ನೆರವೇರಿಸಿದರು.

## ನಿಧನ

### ಶ್ರೀಮತಿ ಭವಾನಿ ಅಮ್ಮ

ಉರ್ವ ಲಾಂಗಲೇನ್, ಮಂಗಳೂರಿನ ದಿ। ಗೋಪಾಲಕೃಷ್ಣ ರಾವ್ ಇವರ ಪತ್ನಿ ಶ್ರೀಮತಿ ಭವಾನಿ ಅಮ್ಮ (88 ವರ್ಷ) ಇವರು ತಾ.5-8-2012ರಂದು ತಮ್ಮ ಸ್ವಗೃಹ 'ಶ್ರೀರಾಮ ನಿಲಯ' ಇಲ್ಲಿ ನಿಧನ ಹೊಂದಿದರು. ಇವರು ಐವರು ಗಂಡು ಮಕ್ಕಳು, ನಾಲ್ವರು ಹೆಣ್ಣು ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ

★★★ ★★★

### ಟಿ. ಶ್ರೀನಿವಾಸ ರಾವ್

ತಿರುವೈಲು ಇಲ್ಲಿಯ ಶ್ರೀ ಟಿ. ಶ್ರೀನಿವಾಸ ರಾಯರು ತಾ.29-7-2012ರಂದು ದೈವಾಧೀನ ರಾದರು. ಮೃತರು ಪತ್ನಿ, ಪುತ್ರ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

★★★ ★★★

### ಇನ್ನಾ ಆನಂದ ರಾವ್

ಶಿಕ್ಷಣ ತಜ್ಞ, ಸಂಘಟಕ, ಪ್ರಸಿದ್ಧ ಇನ್ನಾ ಮನೆತನದ ಇನ್ನಾ ಆನಂದ ರಾವ್ (89) ಇವರು ತಾ.28-07-2012ರಂದು ನಿಧನ ಹೊಂದಿದರು. ಇವರು ಪತ್ನಿ, ಮೂವರು ಪುತ್ರರಾದ ಆದಾಯ ತೆರಿಗೆ ಜಂಟಿ ಆಯುಕ್ತ ಇನ್ನಾ ಸತೀಶ್ ಕುಮಾರ್, ಸೀಮನ್ಸ್ ಮಲೇಶ್ಯಾದ ಉಪಾಧ್ಯಕ್ಷ ಇನ್ನಾ ವಸಂತ ಕುಮಾರ್, ಸುರತ್ಕಲ್‌ನ ಮಕ್ಕಳ ತಜ್ಞ ಇನ್ನಾ ಅನಿಲ್ ಕುಮಾರ್ ಹಾಗೂ ಪುತ್ರಿಯನ್ನು ಅಗಲಿದ್ದಾರೆ. ಇವರು ಇನ್ನಾ, ಮುಂಡ್ಕೂರು, ಮುಲ್ಕಿಯಲ್ಲಿ ಶಿಕ್ಷಣ ಪಡೆದು ಮಂಗಳೂರಿನ ಆಗಿನ ಸರ್ಕಾರಿ ಕಾಲೇಜಿನಲ್ಲಿ 16 ವರ್ಷ, ಸುರತ್ಕಲ್ ಕೆ.ಆರ್.ಇ.ಸಿ.ಯಲ್ಲಿ 24 ವರ್ಷ ಗ್ರಂಥಪಾಲಕರಾಗಿ ಸೇವೆ ಸಲ್ಲಿಸಿರುತ್ತಾರೆ.

★★★ ★★★

### ಐ. ಕೆ. ವಿಜಯಕುಮಾರ್

ಚೆನ್ನೈಯಲ್ಲಿ ವಾಸವಾಗಿದ್ದ ಐ.ಕೆ.ವಿಜಯ ಕುಮಾರ್ (66 ವರ್ಷ) ಇವರು ತಾ.28-07-2012ರಂದು ನಿಧನ ಹೊಂದಿದರು. ಇವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

★★★ ★★★

### ವೈ.ನಾರಾಯಣ ರಾವ್

ಎರ್ಮಾಳಿನ ನಿವೃತ್ತ ಅಧ್ಯಾಪಕ ವೈ.ನಾರಾಯಣ ರಾವ್ (87 ವರ್ಷ) ತಾ.09-08-2012ರಂದು ತಮ್ಮ ಸ್ವಗೃಹದಲ್ಲಿ ನಿಧನ ಹೊಂದಿದರು. ಇವರು ಪತ್ನಿ, ಮೂವರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

| ಸಿಂಹ ಮಾಸದ ವಿಶೇಷ ದಿನಗಳು | |
|---|---|
| 17-08-2012 | ಅಮಾವಾಸ್ಯೆ |
| 27-08-2012 | ಏಕಾದಶಿ |
| 31-08-2012 | ಹುಣ್ಣಿಮೆ |
| 04-09-2012 | ಸಂಕಷ್ಟಹರ ಚೌತಿ |
| 12-09-2012 | ಏಕಾದಶೀ |
| 16-09-2012 | ಕನ್ಯಾ ಸಂಕ್ರಮಣ |

## ಅಭಿನಂದನೆಗಳು

### ರೋಹಿತ್ ರಾವ್



ಮಂಗಳೂರಿನ ಉರ್ವ ಕೆನರಾ ಹೈಸ್ಕೂಲ್‌ನ ವಿದ್ಯಾರ್ಥಿಯಾದ ರೋಹಿತ್‌ರಾವ್ ಇವನು 2011-12ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.91 ಅಂಕಗಳನ್ನು ಗಳಿಸಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿರುತ್ತಾನೆ. ಈತನು ಮಂಗಳೂರಿನ ಡಾ। ಕಿಶೋರ್‌ರಾವ್ ಹಾಗೂ ಅನುರಾಧಾರಾವ್ ದಂಪತಿಗಳ ಪುತ್ರ. ಈತನ ಸಾಧನೆಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

### ಕು। ಶ್ರೇಯ



ಕುಕ್ಕೆಹಳ್ಳಿಯ ಶ್ರೀ ರವಿಶಂಕರ್ ರಾವ್ ಮತ್ತು ಶ್ರೀಮತಿ ವಿದ್ಯಾರವರ ಪುತ್ರಿ ಶ್ರೇಯಳು 2011-12ನೇ ಸಾಲಿನ ದ್ವಿತೀಯ ಪಿಯುಸಿಯಲ್ಲಿ 565/600 (ಶೇ.94.16) ಅಂಕಗಳನ್ನು ಗಳಿಸಿರುತ್ತಾಳೆ. ಈಕೆ ಕುಕ್ಕೆಹಳ್ಳಿ ದಿ। ಜನಾರ್ಧನ ರಾವ್ ಹಾಗೂ ಶ್ರೀಮತಿ ಸುಲೋಚನ ರಾವ್‌ರವರ ಮೊಮ್ಮಗಳು. ಈಕೆಯ ಸಾಧನೆಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

### ಕು. ಹರ್ಷಿತಾ ರಾವ್



ಶ್ರೀ ಪ್ರಶಾಂತ ರಾವ್ ಮತ್ತು ಶ್ರೀಮತಿ ಹರಿಣಾಕ್ಷಿರಾವ್ ಪಾಮಂಜೂರು ಇವರ ಪುತ್ರಿ ಕು. ಹರ್ಷಿತಾ ರಾವ್ ದ್ವಿತೀಯ ಪಿ.ಯು.ಸಿ.ಯ ವಿಜ್ಞಾನ ವಿಭಾಗದಲ್ಲಿ ಶೇಕಡಾ 90ರಷ್ಟು ಅಂಕ ಪಡೆದು ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣಳಾಗಿರುತ್ತಾಳೆ. ಇವಳು ಮೂಡುಬಿದಿರೆ ಆಳ್ವಾಸ್ ಕಾಲೇಜಿನ ವಿದ್ಯಾರ್ಥಿನಿಯಾಗಿರುತ್ತಾಳೆ. ಈಕೆಯ ಸಾಧನೆಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

## ಮಾಂಗಲ್ಯಂ ತಂತುನಾನೇನ ....

ಶ್ರೀಮತಿ ವಸಂತಿ ಮತ್ತು ಶ್ರೀ ಬನ್ನಂಜೆ ಗುರುರಾಜರಾಯರ ಪುತ್ರ **ರಾಜೇಶ್** ಇವರ ವಿವಾಹವು ಶ್ರೀಮತಿ ರೇವತಿ ಮತ್ತು ಮಣಿಕಳ ರಘುವೀರ ರಾಯರ ಪುತ್ರಿ **ದಿವ್ಯಶ್ರೀ** ಇವರೊಂದಿಗೆ ತಾ.12-07-2012 ರಂದು ಪುತ್ತೂರು ಶ್ರೀ ಮಹಾಲಿಂಗೇಶ್ವರ ಸಭಾಭವನದಲ್ಲಿ ನೆರವೇರಿತು. ಮರುದಿನ ಆರತಕ್ಷತೆ ಸಂಗೀತ ರಸಮಂಜರಿ ಕಾರ್ಯಕ್ರಮದೊಂದಿಗೆ ಶ್ರೀ ಶಾರದಾ ಕಲ್ಯಾಣ ಮಂಟಪ ಕುಂಜಿಬೆಟ್ಟು, ಉಡುಪಿ ಇಲ್ಲಿ ಜರಗಿತು.

ಪೆರ್ಲ ಪರಪ್ಪಕರಿಯದಲ್ಲಿರುವ ಶ್ರೀ ಬಿ. ಸತ್ಯನಾರಾಯಣ ರಾವ್ ಮತ್ತು ಶ್ರೀಮತಿ ಸವಿತ ಎಸ್.ರಾವ್ ಇವರ ಪುತ್ರ **ಶ್ರೀ ಪ್ರಭಾಸ್ ಪಿ.ಎಸ್.** ಇವರ ವಿವಾಹವು ಬೆಂಗಳೂರು ಬನಶಂಕರಿಯಲ್ಲಿರುವ ಶ್ರೀ ನರಸಿಂಹ ಭಟ್ ಡಿ.ಕೆ. ಮತ್ತು ಶ್ರೀಮತಿ ಉಮಾಮಹೇಶ್ವರಿ ಇವರ ಪುತ್ರಿ **ಕು। ಮಾಯಾ** ಇವರೊಂದಿಗೆ ತಾ.28-06-2012ರಂದು ಬೆಂಗಳೂರಿನ ಜೆ.ಪಿ.ನಗರದ ಎಂ.ಎಲ್.ಆರ್. ಕನ್ವೆನ್ಶನ್ ಸೆಂಟರ್, ಬ್ರಿಗೇಡ್ ಮಿಲೇನಿಯಂ ಸಭಾಮಂಟಪದಲ್ಲಿ ನೆರವೇರಿತು.

## ಮುಖ್ಯ ಶಿಕ್ಷಕರಾಗಿ ನಂದಳಿಕೆ ಸುಧಾಕರ್‌ರಾವ್

ನಂದಳಿಕೆ ಶ್ರೀಯುತ ಸುಧಾಕರ ರಾವ್ ಇವರು ಶ್ರೀ ವಿದ್ಯಾಬೋಧಿನಿ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ ಕೆದಿಂಜೆಯಲ್ಲಿ ಜನವರಿ 2012ರಿಂದ ಮುಖ್ಯಶಿಕ್ಷಕರಾಗಿ ಅಧಿಕಾರವನ್ನು ಸ್ವೀಕರಿಸಿರುತ್ತಾರೆ. ಈವರೆಗೆ ಮುಖ್ಯಶಿಕ್ಷಕರಾಗಿ ಇದ್ದ ಕೆ. ಅನಿಲ್‌ಕುಮಾರ್ 2011ರಂದು ನಿವೃತ್ತರಾಗಿ ರುತ್ತಾರೆ.

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

ಡಾ। ವೈ. ಸುದರ್ಶನ ರಾವ್

**ಪ್ರಶ್ನೆ: ಫಿಸ್ತುಲಾ(                ) ಎಂದರೇನು? ಇದು ಹೇಗೆ ಬರುತ್ತದೆ? ಇದರ ಚಿಕಿತ್ಸೆ ಹೇಗೆ?**

ಉತ್ತರ: ಮಲದ್ವಾರದ ಹತ್ತಿರ ಸುಮಾರು ಒಂದು ಒಂದೂವರೆ ಇಂಚು ಸುತ್ತಳತೆಯೊಳಗೆ ಒಂದು ಸಣ್ಣಗೆ ಕೀವು ಒಸರುತ್ತಿರುವ ಚಿಕ್ಕ ಗಾಯವೊಂದು ಸುಮಾರು ಸಮಯದಿಂದ ಇದ್ದರೆ ಅದು ಫಿಸ್ತುಲಾ ಖಾಯಿಲೆ ಆಗಿರಬಹುದು. ಈ ಖಾಯಿಲೆಯಲ್ಲಿ ಮಲದ್ವಾರದ ಹತ್ತಿರ ಒಂದು ಮಿಲಿಮೀಟರ್ ಗಾತ್ರದ ಸಣ್ಣ ಗಾಯವಿದ್ದು ಆ ಗಾಯವು ಹೊರಗಿನಿಂದ ನೋಡಲು ಸಣ್ಣ ಗಾತ್ರದ್ದಾಗಿದ್ದರೂ ತುಂಬಾ ಆಳವಾಗಿರುತ್ತದೆ. ಎಷ್ಟು ಆಳವಾಗಿರುತ್ತದೆಂದರೆ ಆ ಗಾಯದ ಇನ್ನೊಂದು ಕೊನೆಯು ಮಲಕೋಶಕ್ಕೇ(          ) ತೆರೆದುಕೊಳ್ಳುತ್ತದೆ. ಈ ಗಾಯಕ್ಕೆ ನೇರವಾಗಿ ಮಲಕೋಶಕ್ಕೆ ಸಂಪರ್ಕವಿರುವುದರಿಂದಲೇ ಈ ಗಾಯವು ಗುಣವಾಗದೆ ಯಾವಾಗಲೂ ಕೀವು ಒಸರುತ್ತಿರುವುದು.

ಮಲಕೋಶದ ಗೋಡೆಯಲ್ಲಿ ಮಲಕೋಶದೊಳಕ್ಕೆ ನೀರಿನಂತಹಾ ದ್ರವವನ್ನು ಸ್ರವಿಸುವ ಗ್ರಂಥಿಗಳಿವೆ. ಮಲಕೋಶದೊಳಗೆ ತೇವಾಂಶವನ್ನು ಕಾಪಾಡಿಕೊಳ್ಳಲು ಈ ವ್ಯವಸ್ಥೆ ಇದೆ. ಫಿಸ್ತುಲಾ ಖಾಯಿಲೆ ಆರಂಭವಾಗುವುದು ಈ ಗ್ರಂಥಿಗಳಲ್ಲಿ. ಕೆಲವು ಜಾತಿಯ ಮೀಣಜೀವಿಗಳ ದಾಳಿಯಿಂದಾಗಿ ಈ ಗ್ರಂಥಿಗಳ ಒಳಗೆ ಕೀವಾಗುತ್ತದೆ. ಈ ಕೀವು ಉಲ್ಬಣಗೊಂಡಾಗ ಅಲ್ಲಿ ಒಂದು ಕುರು(          ) ಆಗುತ್ತದೆ. ಈ ಕುರು ಹಣ್ಣಾದಾಗ ಅದು ಮಲದ್ವಾರದ ಹೊರಗೆ ಚರ್ಮದಿಂದ ಒಡೆದು ಕೀವು ಸೋರಿಹೋಗುತ್ತದೆ. ನಂತರ ಸ್ವಲ್ಪ ದಿವಸಗಳಲ್ಲಿ ನೋವು ಮತ್ತು ಕೀವು ಒಸರುವುದು ಕಡಿಮೆಯಾದರೂ, ಕುರು ಒಡೆದ ಗಾಯ ಚಿಕ್ಕದಾದರೂ, ಸಂಪೂರ್ಣ ವಾಸಿಯಾಗುವುದಿಲ್ಲ ಈ ಗಾಯದಲ್ಲಿ ಪುನಹ ಮೀಣಜೀವಿಗಳ ದಾಳಿಯಾದರೆ ಪುನಹ ನೋವು ಹೆಚ್ಚಾಗಬಹುದು. ಹಾಗೆಯೇ ನೋವು ಹೆಚ್ಚು ಇದ್ದಾಗ ಅದರಲ್ಲಿ ಕೀವು ಇನ್ನಷ್ಟು ಜಾಸ್ತಿ ಬರುತ್ತದೆ. ಈ ಪರಿಸ್ಥಿತಿಯಲ್ಲಿ ಆಂಟಿಬಯಾಟಿಕ್ ಗುಳಿಗೆ ನುಂಗಿದಾಗ ಅಥವಾ ಕೆಲವೊಮ್ಮೆ ತನ್ನಿಂತಾತಾನೆ ಇದ್ದ ಕೀವು ಸೋರಿ ಹೋಗಿ ಈ ಗಾಯ ಸ್ವಲ್ಪ ವಾಸಿಯಾದಂತೆ ತೋರುವುದು, ನಂತರ ಸ್ವಲ್ಪ ದಿನಗಳ ಬಳಿಕ ಇದೇ ಪುನರಾವರ್ತನೆಯಾಗುವುದು ಪಿಸ್ತುಲಾ ಖಾಯಿಲೆಯ ಸ್ವಭಾವ. ಬಹುಕಾಲದಿಂದ ಈ ತೊಂದರೆಯಿದ್ದವರಿಗೆ ಮಲದ್ವಾರದ ಹತ್ತಿರ ಇಂತಹಾ ಎರಡು ಮೂರು ಗಾಯಗಳಿರಬಹುದು. ಅಷ್ಟು ಮಾತ್ರವಲ್ಲದೆ ಈ ಗಾಯಗಳು ಮಲದ್ವಾರಕ್ಕಿಂತ ತುಂಬಾ ದೂರದಲ್ಲಿ ಅಂದರೆ ಸೊಂಟ ಹಾಗೂ ತೊಡೆಗಳಲ್ಲೂ ಆಗಬಹುದು. ಸಿಹಿಮೂತ್ರ ರೋಗಿಗಳಲ್ಲಿ ಮತ್ತು ರೋಗನಿರೋಧಕ ಶಕ್ತಿ ಕಡಿಮೆ ಇರುವವರಲ್ಲಿ ಈ ಖಾಯಿಲೆಯ ತೀವ್ರತೆ ಜಾಸ್ತಿ ಇರುತ್ತದೆ.

ಶಸ್ತ್ರಚಿಕಿತ್ಸೆಯ ಮೂಲಕ ಮಲದ್ವಾರದ ಬಳಿಇರುವ ಗಾಯವನ್ನು ಅದು ಇರುವಷ್ಟು ಆಳದ ತನಕ ಕತ್ತರಿಸಿ ಅಂದರೆ ಮಲಕೋಶದ ತನಕ ಕತ್ತರಿಸಿ ತೆಗೆಯುವುದೇ ಇದರ ಸರಿಯಾದ ಚಿಕಿತ್ಸೆ. ಕೆಲವೊಮ್ಮೆ ರೋಗಿಯು ಅದರಲ್ಲಿ ತುಂಬಾ ಕೀವಾಗಿ ಬಂದಿದ್ದರೆ ಆವಾಗ ಕೇವಲ ಕೀವು ಮಾತ್ರ ತೆಗೆದು ಸ್ವಲ್ಪ ದಿನಗಳ ಬಳಿಕ ಮೇಲೆ ಹೇಳಿದ ಶಸ್ತ್ರಚಿಕಿತ್ಸೆ ಮಾಡಬೇಕಾಗುತ್ತದೆ.

ಶಸ್ತ್ರಚಿಕಿತ್ಸೆ ಮಾಡುವಾಗ ಫಿಸ್ತುಲಾದ ಗಾಯವನ್ನು ಮಲಕೋಶದ ತನಕ ತೆಗೆಯದಿದ್ದರೆ ಈ ಕಾಯಿಲೆಯು ಮರುಕಳಿಸುತ್ತದೆ. ಫಿಸ್ತುಲಾ ಗಾಯವು ಎಷ್ಟು ಆಳವಿದೆ ಎಂಬುದನ್ನು ವೈದ್ಯರು ಮಲಕೋಶದ ಒಳಗೆ ಪ್ರಾಕ್ಟೋಸ್ಕೋಪಿ ಎಂಬ ಉಪಕರಣವನ್ನು ಬಳಸಿ ಅಂದಾಜುಮಾಡುತ್ತಾರೆ. ಕೆಲವೊಂದು ಸಂದರ್ಭಗಳಲ್ಲಿ ಇದರ ಆಳವು ತುಂಬಾ ಜಾಸ್ತಿ ಇದ್ದರೆ ಆವಾಗ ಎಂ.ಆರ್.ಐ ಎಂಬ ಸ್ಕ್ಯಾನಿಂಗ್‌ನಿಂದ ಈ ಮಾಹಿತಿಯನ್ನು ತಿಳಿಯಬಹುದು.

ಫಿಸ್ತುಲಾ ಗಾಯವು ತುಂಬಾ ಆಳವಿದ್ದರೆ ಶಸ್ತ್ರಚಿಕಿತ್ಸೆ ನಡೆಸಿ ಅದನ್ನು ಕತ್ತರಿಸಿ ತೆಗೆಯುವಾಗ ಮಲದ್ವಾರದಿಂದ ಮಲ ತನ್ನಿಂತಾನಾಗಿ ಹೊರಬರದಂತೆ ನಿಯಂತ್ರಿಸುವ ಮಾಂಸ(            )ಕ್ಕೆ ಹಾನಿಯಾಗುವ ಸಾಧ್ಯತೆ ಇರುತ್ತದೆ. ಇಂತಹಾ ಕೇಸುಗಳಲ್ಲಿ ಸೆಟೆನ್ ಎಂದು ಕರೆಯುವ ಔಷಧಿಯುಕ್ತ ದಾರವನ್ನು ಗಾಯದ ಆಳಕ್ಕೆ ತೂರಿಸಿ ಗಾಯವು ಮಲಕೋಶವನ್ನು ಸಂಪರ್ಕಿಸುವ ತೂತಿನ ಮೂಲಕ ಹೊರತಂದು ಎರಡೂ ದಾರಗಳ ತುದಿಯನ್ನು ಸೇರಿಸಿ ಕಟ್ಟುತ್ತಾರೆ . ಈ ಚಿಕಿತ್ಸೆಯಿಂದಲೂ ಫಿಸ್ತುಲಾ ಕಾಯಿಲೆ ನಿಧಾನವಾಗಿ ಗುಣವಾಗುತ್ತದೆ. ಈ ಚಿಕಿತ್ಸೆಯು ಆಯುರ್ವೇದ ಶಾಸ್ತ್ರದಲ್ಲಿ ಸುಶ್ರುತಾಚಾರ್ಯರು ವರ್ಣಿಸಿರುವ ಕ್ಷಾರ ಚಿಕಿತ್ಸೆಯನ್ನು ಹೋಲುತ್ತದೆ.

ಮಲದ್ವಾರದ ಶುಚಿತ್ವದ ಬಗ್ಗೆ ಅಸಡ್ಡೆ, ಹುಳಗಳ ಬಾಧೆ, ಹುಡಿಕಜ್ಜಿ, ಮಲಬದ್ಧತೆ ಸರಿಯಿಲ್ಲದಿರುವುದು, ಇನ್ನೂ ಅಪರೂಪದಲ್ಲಿ ಮಲಕೋಶದ ಕ್ಯಾನ್ಸರ್‌ನಿಂದಾಗಿ ಫಿಸ್ತುಲಾ ಕಾಯಿಲೆ ಬರಬಹುದು. ಆದರೂ ಕೆಲವೊಮ್ಮೆ ಇಂತಹಾ ಏನೂ ಕಾರಣಗಳಿಲ್ಲದೆಯೂ ಈ ಖಾಯಿಲೆ ಬರಬಹುದು.

ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 98451 36322

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

ವಿದ್ಯಾರ್ಥಿ ವೇತನ ವೇದಿಕೆ

### ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್., ಬಿ.ಎಡ್., ಡಿಪ್ಲೋಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.2,00,000/-ಕ್ಕೆ ಮೀರದ (ಅರ್ಜಿ ಸಲ್ಲಿಸುವಾಗ ಈ ವಿಚಾರವನ್ನು ಅಭ್ಯರ್ಥಿಗಳು ದಯವಿಟ್ಟು ಗಮನಿಸಬೇಕು) ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿಯ ಜೊತೆಯಲ್ಲಿ ಹಿಂದಿನ ತರಗತಿಯ ಅಂಕಪತ್ರ ಹಾಗೂ ಪ್ರಸಕ್ತ ಕಲಿಯುತ್ತಿರುವ ಶಾಲೆಯ ಮುಖ್ಯಸ್ಥರ ಪ್ರಮಾಣಪತ್ರವನ್ನು ಒದಗಿಸಬೇಕು. ಅರ್ಜಿ ಫಾರಂಗಳು ಶ್ರೀಶಾರದಾ ಮಂಟಪದ ಕಛೇರಿಯಲ್ಲಿ ಲಭ್ಯವಿದೆ. ಅರ್ಜಿ ಫಾರಂಗಳನ್ನು ತುಂಬಿಸಿ ಸಂಬಂಧಪಟ್ಟ ದಾಖಲೆಗಳೊಂದಿಗೆ ತಾ.30-9-2012ರ ಒಳಗೆ ಸಂಘದ ಕಛೇರಿಗೆ ಕಳುಹಿಸುವುದು.

ವಿದ್ಯಾರ್ಥಿವೇತನ ಪಡೆದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದ ಮೊಬಲಗನ್ನು ಎಂ.ಓ./ ಮೂಲಕ ಕಳುಹಿಸಲಾಗುವುದು.

**ವಿದ್ಯಾರ್ಥಿವೇತನ ಹಣ ಪಡೆಯಲು ಮಾಹಿತಿ**

ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಸಲ್ಲಿಸಿದವರ ಹಣ ಮಂಜೂರಾದರೆ ಹಣವನ್ನು ಬ್ಯಾಂಕ್ ಮೂಲಕ ಕಳುಹಿಸಲಾಗುತ್ತದೆ. ಇದಕ್ಕೆ ಪೂರಕವಾಗಿ ವಿದ್ಯಾರ್ಥಿಗಳ/ಪೋಷಕರ ಬ್ಯಾಂಕ್ ಅಕೌಂಟ್ (ಸದ್ಯ ಇಲ್ಲವಾದರೆ ಈಗ ಮಾಡಿಸಿರಿ) ವಿವರಗಳನ್ನು ತಿಳಿಸಿರಿ.

1. ಬ್ಯಾಂಕ್ ಖಾತೆಯ ಹೆಸರು, ವಿಳಾಸ.
2. ಖಾತೆಯ ವಿವರ (ಎಸ್.ಬಿ. ಇತ್ಯಾದಿ) ಹಾಗೂ ಪೂರ್ಣ ನಂಬರ್.
3. ಬ್ಯಾಂಕಿನ ಕೋಡ್ ನಂಬರ್. ಇದು ಪಾಸ್ ಪುಸ್ತಕ/ಚೆಕ್‌ನಲ್ಲಿ ಬರೆದಿರುತ್ತಾರೆ. ಇಲ್ಲವಾದರೆ ಬ್ಯಾಂಕ್ ಶಾಖೆಯವರು ಬರೆದುಕೊಡುತ್ತಾರೆ. (ಪಾಸ್ ಪುಸ್ತಕದಲ್ಲಿ)

**(ಮೇಲಿನ ಮೂರು ವಿವರಗಳನ್ನು ಒಳಗೊಂಡ ಖಾತೆಯ ಪಾಸ್‌ಪುಸ್ತಕದ ಪುಟದ ಜೆರಾಕ್ಸ್ ಪ್ರತಿ ಕಳುಹಿಸಿರಿ)**

ಈ ವಿವರಗಳನ್ನು ಸಂಗ್ರಹಿಸಿ ವಿದ್ಯಾರ್ಥಿ ವೇತನ ಮಂಜೂರಾದಾಗ ನೇರ ಬ್ಯಾಂಕ್ ಖಾತೆಗೆ ಹಣವನ್ನು ಜಮೆ ಮಾಡಲು ಪ್ರಯತ್ನಿಸಲಾಗುವುದು.

**- ಅಧ್ಯಕ್ಷರು, ವಿದ್ಯಾರ್ಥಿವೇತನ ವೇದಿಕೆ, ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 101.**

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

### ಉದಯಚಂದ್ರ ಪ್ರತಿಭಾ ಪುರಸ್ಕಾರ 2010-11

ಸಂಘದ ಯುವವೇದಿಕೆಯ ಆಶ್ರಯದಲ್ಲಿ ನಮ್ಮ ಸಮಾಜದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಉದಯಚಂದ್ರ ಸ್ಮಾರಕ ಪುರಸ್ಕಾರ ನೀಡಿ ಪುರಸ್ಕರಿಸಲು ನಿಶ್ಚಯಿಸಲಾಗಿದೆ. 2010-11ನೇ ಸಾಲಿನ ಎಸ್.ಎಸ್.ಎಲ್.ಸಿ., ಪದವಿಪೂರ್ವ (ಮೂರು ವಿಭಾಗ) ತರಗತಿಗಳ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ ಮತ್ತು ಪದವಿ, ಸ್ನಾತಕೋತ್ತರ, ವೈದ್ಯಕೀಯ, ಕಾನೂನು, ಇಂಜಿನಿಯರಿಂಗ್‌ಗಳಲ್ಲಿ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು. ಆದ್ದರಿಂದ ಶೇಕಡಾ 80ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು 30-09-2012ರ ಒಳಗೆ ಅಂಕಪಟ್ಟಿಯ ಪ್ರತಿ ಮತ್ತು ಇತರ ಮಾಹಿತಿಯೊಂದಿಗೆ ಅರ್ಜಿ ಕಳುಹಿಸಿ ಕೊಡಬೇಕು. ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿಯೂ 80%*ಕ್ಕಿಂತ ಹೆಚ್ಚು ಅಂಕಗಳಿಸಿದವರು ಮಾತ್ರ ಅರ್ಜಿ ಕಳುಹಿಸುವುದು. ಪದವಿ ಮತ್ತು ಇತರ ವಿಭಾಗಗಳಲ್ಲಿ ರ‍್ಯಾಂಕ್‌ಗಳಿಸಿದ ಬಗ್ಗೆ ಅಧಿಕೃತ ದಾಖಲೆಗಳನ್ನು ಕಳುಹಿಸಬೇಕು.

ಅರ್ಜಿಯನ್ನು "ಸಂಚಾಲಕರು, ಯುವವೇದಿಕೆ, ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು ಉಡುಪಿ - 576 102" ಇಲ್ಲಿಗೆ ಕಳುಹಿಸಬೇಕು. **ಅರ್ಜಿಯಲ್ಲಿ ಅವಶ್ಯವಾಗಿ ತಮ್ಮ ದೂರವಾಣಿ ಸಂಖ್ಯೆಯನ್ನು ನಮೂದಿಸಬೇಕು.** ವಿಜಯದಶಮಿಯಂದು ಸಂಜೆ ಪ್ರತಿಭಾ ಪುರಸ್ಕಾರ ವಿತರಿಸಲಾಗುವುದು.

**- ಸಂಚಾಲಕರು, ಯುವವೇದಿಕೆ.**

*(ಎಸ್‌ಎಸ್‌ಎಲ್‌ಸಿ. ಹಾಗೂ ಪಿಯುಸಿ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಪಡೆದ ಒಬ್ಬೊಬ್ಬರಿಗೆ ಮಾತ್ರ ಪುರಸ್ಕಾರ ನೀಡಲಾಗುವುದು. ಪದವಿ ಹಾಗೂ ಇತರ ವಿಭಾಗಗಳಲ್ಲಿ ರ‍್ಯಾಂಕ್ ವಿಜೇತರಿಗೆ ಮಾತ್ರ ಪುರಸ್ಕಾರವಿದೆ.)

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

### ಅಂಬಲ್ಪಾಡಿ ಕೃಷ್ಣ ರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ

ಉಡುಪಿ/ದ.ಕ. ಜಿಲ್ಲೆಯ ವಿಶ್ವವಿದ್ಯಾಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ (ಯಾವುದೇ ವಿಷಯದಲ್ಲಿ) ರ‍್ಯಾಂಕ್‌ಗಳಿಸಿದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ಅರ್ಹ ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ‍್ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರದೊಂದಿಗೆ ತಾ.30-09-2012ರ ಒಳಗೆ ಸ್ಥಾನಿಕ ಬ್ರಾಹ್ಮಣ ಸಂಘ ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ.

**-ಕಾರ್ಯದರ್ಶಿ**

## ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ

ಉದಯಾದ್ರಿ ಕ್ಷೇತ್ರ, ಪಡುಬಿದ್ರಿ

### ಋಗುಪಾಕರ್ಮವು

ತಾರೀಕು 29-08-2012ರಂದು ಬುಧವಾರ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ, ಉದಯಾದ್ರಿ ಕ್ಷೇತ್ರದಲ್ಲಿ ನಡೆಯಲಿದ್ದು, ಬೆಳಿಗ್ಗೆ 7ರಿಂದ ಪ್ರಾರಂಭವಾಗಲಿದೆ. ಸಮಾಜ ಬಾಂಧವರು ಸಮಯಕ್ಕೆ ಸರಿಯಾಗಿ ಬಂದು, ಉಪಾಕರ್ಮದಲ್ಲಿ ಭಾಗವಹಿಸಬೇಕಾಗಿ ವಿನಂತಿ. ಭಾಗವಹಿಸುವವರು ಹರಿವಾಣ, ಕೌಳಿಗೆ ಸೌಟನ್ನು ತರಬೇಕಾಗಿ ವಿನಂತಿ.

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು, ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

| | | |
|---|---|---|
| ಮಂಗಳಾರತಿ | : | ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ |
| ಪ್ರತಿ ಸೋಮವಾರ | : | **"ಸತ್ಸಂಗದವರಿಂದ ಭಜನೆ"** ಸಂಜೆ 6-00 ಗಂಟೆಯಿಂದ |
| ಪ್ರತಿ ಮಂಗಳವಾರ | : | **"ಸೌಂದರ್ಯಲಹರಿ ಪಾರಾಯಣ"** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಶುಕ್ರವಾರ | : | **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಆದಿತ್ಯವಾರ | : | ಸ್ವಾಧ್ಯಾಯ ಸಮಿತಿಯವರಿಂದ **"ಪಾರಾಯಣ"** ಸಂಜೆ ಗಂಟೆ 4-30ರಿಂದ |

**ಸಂಕಷ್ಟಹರ ಚತುರ್ಥಿಯಂದು (ತಾ.04-09-2012) "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.22-08-2012 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.27-08-2012 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

### ಡಾ। ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಡಾ। ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು "ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ"ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. 2012-2013ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು. ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ತಮ್ಮ ಹೆಸರು, ರಕ್ಷಕರ ಹೆಸರು, ಪರೀಕ್ಷೆಯ ಅಂಕಪಟ್ಟಿ ಹಾಗೂ ವಿದ್ಯಾಭ್ಯಾಸ ಮಾಡುವ/ಮುಂದುವರಿಸುವ ಬಗ್ಗೆ ದಾಖಲೆಯೊಂದಿಗೆ (ವ್ಯಾಸಂಗ ಪ್ರಮಾಣ ಪತ್ರ) ಈ ಕೆಳಗಿನ ವಿಳಾಸಕ್ಕೆ ತಾ.30-09-2012ರ ಒಳಗೆ ತಲಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಮಂಟಪ ಅಥವಾ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ವಿಚಾರಿಸಬಹುದು.**

**ಸಂಚಾಲಕರು,** ವಿದ್ಯಾರ್ಥಿ ವೇತನ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),
ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು ಉಡುಪಿ - 576 102. ಫೋನ್ : 0820-2520754

**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)